# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

KANNADA POST

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನ ಪತ್ರಿಕೆ    Kannada Daily

ಹಾಸನ    E-mail : kannadapostnews@gmail.com    / ಕನ್ನಡ post    Price: ₹1

Vol.No.01 | Issue. 224 | Pages. 2 | Date: 17-07-2025, THURSDAY    RNI NO: KARKAN/2024/89601

ಸಂಪುಟ : 01 - ಸಂಚಿಕೆ : 224 - ಪುಟಗಳು : 2 - 17 ಜುಲೈ 2025 ಗುರುವಾರ    Ph: 8762954248    ದರ : ₹1


# ಕೆಂಪೇಗೌಡ ನಾಡಪ್ರಭು ಮಾತ್ರವಲ್ಲ ಧರ್ಮಪ್ರಭು

## ಮಕ್ಕಳಿಗೆ ಮಹನೀಯರ ಚರಿತ್ರೆ ತಿಳಿಸಿಕೊಡಿ | ನಿರ್ಮಲಾನಂದನಾಥ ಶ್ರೀ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕೆಂಪೇಗೌಡರು ಕೇವಲ ನಾಡಪ್ರಭು ಮಾತ್ರವಲ್ಲದೆ ಧರ್ಮ ಪ್ರಭುವೂ ಆಗಿದ್ದರು ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಜಿಲ್ಲಾ ವಕೀಲರ ಸಂಘದಿಂದ ನಗರದ ಜಿಲ್ಲಾ ವಕೀಲರ ಭವನದಲ್ಲಿ ಬುಧವಾರ ಹಮ್ಮಿಕೊಂಡಿದ್ದ ನಾಡಪ್ರಭು ಕೆಂಪೇಗೌಡರ 516ನೇ ಜಯಂತಿ ಉದ್ಘಾಟಿಸಿ ಆಶೀರ್ವಚನ ನೀಡಿದ ಶ್ರೀಗಳು, ಕೆಂಪೇಗೌಡರ ಜೀವನ ಎಲ್ಲರಿಗೂ ಆದರ್ಶನೀಯ. ನಿತ್ಯ ಮನೆಯಲ್ಲಿ ಪಾತ್ರೆಗಳನ್ನು ಉಜ್ಜಿ ತೊಳೆಯುವಂತೆ ಮನಸ್ಸನ್ನು ಪ್ರತಿದಿನ ಶುಚಿ ಮಾಡಿಕೊಳ್ಳಬೇಕು. ಬಸವಣ್ಣ, ಅಂಬೇಡ್ಕರ್, ಕೆಂಪೇಗೌಡರಂತಹ ಮಹನೀಯರ ಕುರಿತು ಮಕ್ಕಳಿಗೆ ಹೇಳಿಕೊಡುವ ಅವಶ್ಯಕತೆ ಹೆಚ್ಚಿದೆ. ಕೇವಲ ಶಿಕ್ಷಕರಿಂದ ಮಕ್ಕಳ ವ್ಯಕ್ತಿತ್ವ



ವಿಕಸನಗೊಳಿಸುವುದು ಅಸಾಧ್ಯ. ಆದ್ದರಿಂದಲೇ ಸಮಾಜಕ್ಕೆ ಒಳ್ಳೆಯ ಕೊಡುಗೆ ನೀಡಿದ ವ್ಯಕ್ತಿಗಳ ಜಯಂತಿ ಆಚರಿಸಲಾಗುತ್ತದೆ. ಆ ಮೂಲಕ ಭವಿಷ್ಯದ ಪೀಳಿಗೆಗೆ ಸಾಧನೆಯ ಛಲ ಬರುತ್ತದೆಂದರು.

ಕೆಂಪೇಗೌಡ ಅವರು ಸರ್ವ ಸಮುದಾಯದ ಏಳಿಗೆಗೆ ಶ್ರಮ ವಹಿಸಿದರು. ಎಲ್ಲಾ ಭಾಷೆ, ಜನಾಂಗದವರನ್ನು ಸೇರಿಸಿ ನಾಡು ಕಟ್ಟಿದರು. ಬೆಂಗಳೂರು ಇವತ್ತು ವಿಶ್ವಮಟ್ಟಕ್ಕೆ ಬೆಳೆಯಲು ಕೆಂಪೇಗೌಡ ಕಾರಣ. ಅವರನ್ನು ನಾಡಪ್ರಭು ಮಾತ್ರವಲ್ಲದೆ ಧರ್ಮಪ್ರಭು ಎಂದೂ ಕರೆಯಲಾಗುತ್ತದೆ. ಅವರು ಸಾಮ್ರಾಟ ಮಾತ್ರವಲ್ಲದೆ ತ್ಯಾಗಿ, ಮಿತ ಭಾಷಿ, ಯೋಗಿಯಾಗಿದ್ದರು. ಆರ್ಥಿಕ ವ್ಯವಸ್ಥೆ ಸದೃಢಗೊಳಿಸಿದರು. ನಾಡನ್ನು ಕಟ್ಟಲು ತಮ್ಮದೇಯಾದ ಯೋಜನೆ ಹಾಕಿಕೊಂಡಿದ್ದರು ಎಂದರು.

ಹೆಚ್ಚು ಮಾತನಾಡಿದವರೇ ಗೆಲ್ಲುತ್ತಾರೆಂಬ ಕಾಲವೊಂದಿತ್ತು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಪ್ರಸ್ತುತ ನಾವು ಎಐ ಕಾಲಘಟ್ಟದಲ್ಲಿದ್ದೇವೆ.

> ಮೊದಲೆಲ್ಲ ಜೋರಾಗಿ ಮಾತನಾಡಿದರೆ ಗೆಲ್ಲಬಹುದಿತ್ತು. ಆದರೆ ಪ್ರಪಂಚ ಈಗ ಬದಲಾಗಿದೆ. ಮಾತಿಗಿಂತ ಕೃತಿ ಮಹತ್ವದ್ದಾಗಿದ್ದು ನಾವು ನಮ್ಮ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡಬೇಕು. ಮಹನೀಯರ ತತ್ವಾದರ್ಶಗಳನ್ನು ಮಕ್ಕಳಿಗೆ ಹೇಳಿಕೊಡಬೇಕು.
>
> **- ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ**

ಕೆಂಪೇಗೌಡರು ಕೈಯಲ್ಲಿ ಕತ್ತಿ ಹಿಡಿದು ಹೋರಾಟ ಮಾಡಿದ್ದರು. ಹಾಗಂತ ನಾವು ಅದನ್ನು ಪ್ರದರ್ಶಿಸಿದರೆ ಜೈಲಿಗೆ ಹಾಕುತ್ತಾರೆ. ಎಐ ಕಾಲದಲ್ಲಿರುವುದರಿಂದ ಮಾತು ಕಡಿಮೆ ಮಾಡಬೇಕಿದೆ ಎಂದು ಸಲಹೆ ನೀಡಿದರು.

ಮನುಷ್ಯ ಜನ್ಮದ ಉದ್ದೇಶ ಮುಕ್ತಿಯ ಕಡೆಗೆ ಇರಬೇಕು. ಕೆಂಪೇಗೌಡರು ಮುಕ್ತಿಗೆ ಇರುವ ಮೂರು ದಾರಿಗಳನ್ನು ಅಗಾಧ ಆಡಳಿತದ ಮಧ್ಯೆಯು ಅಳವಡಿಸಿಕೊಂಡಿದ್ದರು. ಅಪೇಕ್ಷೆಯಿಲ್ಲದೆ ಜನಸೇವೆ, ಮಾಡಿದ ಸೇವೆಯ ಪುಣ್ಯವನ್ನು ಪರಮಾತ್ಮನಿಗೆ ಒಪ್ಪಿಸುವಿಕೆ ಹಾಗು ಜ್ಞಾನಾರ್ಜನೆಗೆ ಮಹತ್ವದ ಕೊಡುಗೆ ನೀಡಿದರು. ಈ ನಿಟ್ಟಿನಲ್ಲಿ ಅನೇಕ ಕಡೆ ಅಗ್ರಹಾರಗಳನ್ನು ನಿರ್ಮಿಸಿದ್ದಾರೆ ಎಂದರು.

ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಹೇಮಾವತಿ ಮಾತನಾಡಿ, ಬೆಂಗಳೂರು ನಗರ ನಿರ್ಮಾಣದಲ್ಲಿ ಕೆಂಪೇಗೌಡರ ಕೊಡುಗೆ ಅಗಾಧವಾದುದು. ಅವರ ಚರಿತ್ರೆಯನ್ನು ಭವಿಷ್ಯದ ಪೀಳಿಗೆ ಅರಿಯಬೇಕು ಎಂದರು.

ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಡಿ.ಟಿ. ಪ್ರಸನ್ನ, ಪ್ರಧಾನ ಕಾರ್ಯದರ್ಶಿ ಹೊಂಬೇಶ್, ಕಾರ್ಲೆ ಮೊಗಣ್ಣಗೌಡ, ಸಂತೋಷ್ ಇತರರು ಹಾಜರಿದ್ದರು.

# ಕೆಎಸ್ಆರ್ಟಿಸಿ ಬಸ್ ಮುಖಾಮುಖಿ ಡಿಕ್ಕಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲ್ಲೂಕಿನ ವೆಂಕಟಿಹಳ್ಳಿ ಬಳಿ ಬುಧವಾರ ಎರಡು ಕೆಎಸ್ಆರ್ಟಿಸಿ ಬಸ್‌ಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ 18 ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ.

ಸಕಲೇಶಪುರದಿಂದ ಮೂಡಿಗೆರೆಗೆ ತೆರಳುತ್ತಿದ್ದ ಬಸ್‌ಗೆ ಎದುರುಗಡೆಯಿಂದ ಬರುತ್ತಿದ್ದ ಬಸ್ ಡಿಕ್ಕಿಯಾಗಿದೆ. ಸಕಲೇಶಪುರಕ್ಕೆ ತೆರಳುತ್ತಿದ್ದ ಬಸ್‌ನಲ್ಲಿ ಶಾಲಾ-ಕಾಲೇಜು ವಿದ್ಯಾರ್ಥಿಗಳು ಇದ್ದರು.

ಸ್ಥಳೀಯರ ನೆರವಿನಿಂದ ಗಾಯಾಳುಗಳನ್ನು ಸಕಲೇಶಪುರದ ಕ್ರಾಫರ್ಡ್ ಆಸ್ಪತ್ರೆಗೆ ದಾಖಲಿಸಲಾಯಿತು. 16 ವಿದ್ಯಾರ್ಥಿಗಳು ಕೆಪಿಎಸ್‌ಸಿ ಶಾಲೆಗೆ ಸೇರಿದವರಾಗಿದ್ದು, ಇವರಲ್ಲಿ ಮೂವರು ವಿದ್ಯಾರ್ಥಿಗಳು ಗಂಭೀರ ಗಾಯಗೊಂಡಿದ್ದರಿಂದ ಹೆಚ್ಚಿನ ಚಿಕಿತ್ಸೆಗಾಗಿ ಹಾಸನದ ಹಿಮ್ಸ್‌ಗೆ ರವಾನಿಸಲಾಯಿತು.

ಶಾಸಕ ಸಿಮೆಂಟ್ ಮಂಜು ಆಸ್ಪತ್ರೆಗೆ ಭೇಟಿ ನೀಡಿ, ಗಾಯಾಳುಗಳ ಆರೋಗ್ಯ ವಿಚಾರಿಸಿದರು. ಬಳಿಕ ವೈದ್ಯಾಧಿಕಾರಿಯನ್ನು ಸ್ಥಳಕ್ಕೆ ಕರೆಸಿ ಗಾಯಾಳುಗಳಿಗೆ ಉತ್ತಮ ಚಿಕಿತ್ಸೆ ಒದಗಿಸುವಂತೆ ಸೂಚಿಸಿದರು. ಇದಲ್ಲದೆ ಗಾಯಾಳುಗಳ ಚಿಕಿತ್ಸಾ ವೆಚ್ಚವನ್ನು ಸಂಪೂರ್ಣ ಕೆಎಸ್ಆರ್ಟಿಸಿ ಭರಿಸಬೇಕು




ಮತ್ತು ಹೆಚ್ಚಿನ ಚಿಕಿತ್ಸೆಯ ಅಗತ್ಯವಿದ್ದರೆ ಹಾಸನ ಜಿಲ್ಲಾಸ್ಪತ್ರೆಗೆ ವರ್ಗಾಯಿಸುವಂತೆ ಸೂಚನೆ ನೀಡಿದರು. ಸ್ಥಳಕ್ಕೆ ಗ್ರಾಮಾಂತರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು.

## ಅತ್ಯಾಚಾರಿಗಳಿಗೆ ಕಠಿಣ ಶಿಕ್ಷೆ ವಿಧಿಸಲು ಆಗ್ರಹ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಬೆಂಗಳೂರಿನಲ್ಲಿ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಎಸಗಿರುವ ಉಪನ್ಯಾಸಕರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಿ ಎಐಡಿಎಸ್‌ಓ ನೇತೃತ್ವದಲ್ಲಿ ಬುಧವಾರ ಹೇಮಾವತಿ ಪ್ರತಿಮೆ ಎದುರು ಪ್ರತಿಭಟನೆ ನಡೆಸಲಾಯಿತು.

ಎಐಡಿಎಸ್‌ಓ ಜಿಲ್ಲಾ ಸಂಚಾಲಕಿ ಚೈತ್ರ ಮಾತನಾಡಿ, ಉಪನ್ಯಾಸಕರೇ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಎಸಗಿ, ಬೆದರಿಕೆ ಒಡ್ಡಿರುವುದು ಹೇಯ ಕೃತ್ಯ. ಹೆಣ್ಣು ಮಕ್ಕಳಿನ ಮೇಲಿನ ದೌರ್ಜನ್ಯ ದಿನೇ ದಿನೆ ಹೆಚ್ಚುತ್ತಿದೆ.

ಒರಿಸ್ಸಾದಲ್ಲಿ ಕಾಲೇಜಿನ ಉಪನ್ಯಾಸಕರು ನೀಡಿರುವ ಲೈಂಗಿಕ ಕಿರುಕುಳದಿಂದ ಬೇಸತ್ತು, ಒಬ್ಬ ವಿದ್ಯಾರ್ಥಿನಿ ಬೆಂಕಿ ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ, ಆರೋಪಿಗಳಿಗೆ ಕಠಿಣ ಶಿಕ್ಷೆ ನೀಡದಿದ್ದರೆ, ಇಂತಹ ಪ್ರಕರಣಗಳು ಹೆಚ್ಚಾಗುತ್ತವೆ ಎಂದು ಹೇಳಿದರು.

ಈ ಘೋರ ಘಟನೆಯು ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಪಕವಾಗಿರುವ ಲೈಂಗಿಕ ದೌರ್ಜನ್ಯ ಸಮಸ್ಯೆಗಳಿಗೆ ಹಿಡಿದ ಕನ್ನಡಿಯಾಗಿದೆ. ಯುವ ಮನಸ್ಸುಗಳನ್ನು ಸ್ವಚ್ಛಗೊಳಿಸಿ ಅವರ ಭವಿಷ್ಯವನ್ನು ಉಜ್ವಲಗೊಳಿಸಬೇಕಾದ ಪ್ರಾಧ್ಯಾಪಕರು ಇಂತಹ ಹೇಯ ಕೃತ್ಯಗಳಲ್ಲಿ ಭಾಗಿಯಾಗಿರುವುದು ದುರಂತ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಘಟನೆ ಬಗ್ಗೆ ತ್ವರಿತ ಹಾಗೂ ನಿಷ್ಪಕ್ಷಪಾತ ಮತ್ತು ಸಂಪೂರ್ಣ ತನಿಖೆ ನಡೆಸಿ, ಎಲ್ಲಾ ಅಪರಾಧಿಗಳನ್ನು ಕೂಡಲೇ ಕಾನೂನಿನ ಮುಂದೆ ತರಬೇಕು. ಆರೋಪಿ ಉಪನ್ಯಾಸಕರನ್ನು ತಕ್ಷಣವೇ ಅಮಾನತುಗೊಳಿಸಬೇಕು. ಇದರಲ್ಲಿ ಪ್ರಬಲ ಕುಂದುಕೊರತೆ ನಿವಾರಣಾ ಕಾರ್ಯ ಸಮಿತಿ ಸ್ಥಾಪಿಸುವುದು ಸೇರಿ ಲೈಂಗಿಕ ಕಿರುಕುಳ ಮತ್ತು ದೌರ್ಜನ್ಯದಿಂದ ವಿದ್ಯಾರ್ಥಿಗಳನ್ನು ರಕ್ಷಿಸಲು ಶಿಕ್ಷಣ ಸಂಸ್ಥೆಗಳಲ್ಲಿ ಕಠಿಣ ಕ್ರಮಗಳನ್ನು ಜಾರಿಗೊಳಿಸಬೇಕು. ಸಂತ್ರಸ್ತೆಗೆ ಸಂಪೂರ್ಣ ಬೆಂಬಲ ನೀಡಬೇಕು ಎಂದು ಆಗ್ರಹಿಸಿ, ಸರ್ಕಾರ ಕೂಡ ವಿದ್ಯಾರ್ಥಿ ಯುವಜನರಲ್ಲಿ ಉನ್ನತ ಆದರ್ಶ ಮೌಲ್ಯಗಳನ್ನು ಬಿತ್ತುವ ನಿಟ್ಟಿನಲ್ಲಿ ಕಾಲೇಜುಗಳಲ್ಲಿ ಕಾರ್ಯಕ್ರಮ ಸಂಘಟಿಸಬೇಕೆಂದು ಹೇಳಿದರು. ಪ್ರತಿಭಟನೆಯಲ್ಲಿ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಜಿಲ್ಲೆಗೆ ತಜ್ಞರ ತಂಡ ಕಳುಹಿಸಿ ಸಚಿವ ಸೋಮಣ್ಣ ಮನವಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಇತ್ತೀಚೆಗೆ ಜಿಲ್ಲಾ ಪ್ರವಾಸ ಕೈಗೊಂಡಿದ್ದ ಕೇಂದ್ರ ರೇಲ್ವೆ ಮತ್ತು ಜಲಶಕ್ತಿ ರಾಜ್ಯ ಖಾತೆ ಸಚಿವ ವಿ. ಸೋಮಣ್ಣ ಅವರು ಜಿಲ್ಲೆಯ ತೆಂಗು ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ.

ನವದೆಹಲಿಯಲ್ಲಿ ಶಿವರಾಜ್ ಸಿಂಗ್ ಚವ್ಹಾಣ್ ಅವರನ್ನು ಭೇಟಿ ಮಾಡಿದ ಅವರು, ತುಮಕೂರು ಹಾಗೂ ಹಾಸನದ ಪ್ರವಾಸದ ಸಂದರ್ಭದಲ್ಲಿ ತೆಂಗು ಬೆಳೆಗೆ



ಹರಡುತ್ತಿರುವ ಬಿಳಿ ನೊಣ, ಕಾಂಡ ರಸ ಸೋರುವುದು ಮತ್ತು ಗ್ಯಾನೋಡರ್ಮ ಸೇರಿ ವಿವಿಧ ಕೀಟ ಮತ್ತು ರೋಗಗಳ ಕುರಿತು ರೈತರು ಮಾಹಿತಿ ನೀಡಿದ್ದನ್ನು ಸಚಿವರ ಗಮನಕ್ಕೆ ತಂದರು.

ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ವಿಜ್ಞಾನಿಗಳ ಮತ್ತು ಅಧಿಕಾರಿಗಳನ್ನೊಳಗೊಂಡ ತಂಡವನ್ನು ಈ ಭಾಗಕ್ಕೆ ನಿಯೋಜಿಸಬೇಕು. ತಿಟಪೂರಿನಲ್ಲಿ ತೆಂಗಿನಕಾಯಿ ಸಂಶೋಧನಾ ಸಂಸ್ಥೆ ಸ್ಥಾಪಿಸಬೇಕು. ತುಮಕೂರು ಜಿಲ್ಲೆಯ ತೆಂಗು ಬೆಳೆಗಾರರ ಬಹುದಿನಗಳ ಬೇಡಿಕೆಯನ್ನು ಈಡೇರಿಸುವ ನಿಟ್ಟಿನಲ್ಲಿ ಶೀಘ್ರ ಕ್ರಮ ಜರುಗಿಸಬೇಕು ಎಂದು ಸಚಿವ ಸೋಮಣ್ಣ ಮನವಿ ಮಾಡಿದ್ದಾರೆ.

ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಚವ್ಹಾಣ್, ಅಗತ್ಯ ಕ್ರಮ ಜರುಗಿಸುವಂತೆ ಸಭೆಯಲ್ಲಿ ಹಾಜರಿದ್ದ ಕೃಷಿ ಇಲಾಖೆಯ ಅಧಿಕಾರಿಗಳಿಗೆ ಆದೇಶಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ರೈತಪರ ಕೆಲಸ ಮಾಡಲು ಸನ್ನದ್ಧವಾಗಿದೆ ಎಂದು ವಿ. ಸೋಮಣ್ಣ ತಿಳಿಸಿದ್ದಾರೆ.

## ಹೃದಯಾಘಾತ: ಮಕ್ಕಳ ಆರೋಗ್ಯ ತಪಾಸಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯಲ್ಲಿ ಹೃದಯಾಘಾತ ಪ್ರಕರಣ ಹೆಚ್ಚು ವರದಿಯಾಗುತ್ತಿರುವ ಹಿನ್ನೆಲೆಯಲ್ಲಿ ಶಾಲಾ ಮಕ್ಕಳ ಆರೋಗ್ಯ ತಪಾಸಣೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮುಂದಾಗಿದೆ.

ಈ ವರೆಗೂ ನಡೆದ ಆರೋಗ್ಯ ತಪಾಸಣೆಯಲ್ಲಿ 112 ವಿದ್ಯಾರ್ಥಿಗಳಿಗೆ ಶಂಕಿತ ಹೃದಯ ಸಮಸ್ಯೆ ಇರುವುದು ಕಂಡುಬಂದಿದೆ. ಕಳೆದ ಒಂದೂವರೆ ತಿಂಗಳಿನಲ್ಲಿ ಜಿಲ್ಲೆಯಲ್ಲಿ ಯುವಕರು, ವಿದ್ಯಾರ್ಥಿಗಳು ಸೇರಿ ಒಟ್ಟು 45ಕ್ಕೂ ಹೆಚ್ಚು ಮಂದಿ ಹಠಾತ್ ಸಾವನ್ನಪ್ಪಿದ್ದರಿಂದ ಹೃದಯಾಘಾತದಿಂದ ಮೃತಪಟ್ಟಿದ್ದಾರೆ ಎನ್ನಲಾಗಿದೆ.

ಈ ಸಂಬಂಧ ಅಧಿಕಾರಿಗಳ ಸಭೆ ನಡೆಸಿದ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ಅವರು 1ನೇ ತರಗತಿಯಿಂದ 10ನೇ ತರಗತಿವರೆಗೆ ಜಿಲ್ಲೆಯ ಎಲ್ಲಾ ಶಾಲೆಯ ವಿದ್ಯಾರ್ಥಿಗಳಿಗೆ ಹೃದಯ ತಪಾಸಣೆ ನಡೆಸುವಂತೆ ಸೂಚಿಸಿದ್ದರು. ಈ ಹಿನ್ನೆಲೆ ಕಳೆದ ಒಂದು ವಾರದಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿಗಳಿಗೆ ತಪಾಸಣೆ ನಡೆಸಲಾಗುತ್ತಿದೆ.

ಜಿಲ್ಲೆಯಲ್ಲಿ ಇದುವರೆಗೂ 1,185 ಶಾಲೆಗಳ 56,000 ವಿದ್ಯಾರ್ಥಿಗಳಿಗೆ ಹೃದಯ ತಪಾಸಣೆ ಮಾಡಲಾಗಿದೆ. ಇವರಲ್ಲಿ 112 ವಿದ್ಯಾರ್ಥಿಗಳಿಗೆ ಶಂಕಿತ ಹೃದಯ ಸಮಸ್ಯೆ ಇರುವುದು ಕಂಡುಬಂದಿದೆ. ಆ ವಿದ್ಯಾರ್ಥಿಗಳನ್ನು ಸ್ಕ್ರೀನಿಂಗ್‌ಗೆ ಕಳುಹಿಸಿ ಹೃದಯ ಸಮಸ್ಯೆ ಇದ್ದರೆ ಚಿಕಿತ್ಸೆ ಕೊಡಿಸಲು ಆರೋಗ್ಯ ಇಲಾಖೆ ನಿರ್ಧರಿಸಿದೆ.

# ಪ್ರಸಾದ ಸೇವಿಸಿ ಅಸ್ವಸ್ಥ: ಜಿಲ್ಲಾಡಳಿತದಿಂದ ಮಾರ್ಗಸೂಚಿ

## ಅಡುಗೆ ಕೋಣೆಗಳಲ್ಲಿ ಸ್ವಚ್ಛತೆ, ಸಿಸಿಟಿವಿ ಕ್ಯಾಮರಾ ಇರಲಿ | ಜಿಲ್ಲಾಧಿಕಾರಿ ಸೂಚನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅರಸೀಕೆರೆ ತಾಲ್ಲೂಕಿನ ಮಾಲೇಕಲ್ ತಿರುಪತಿ ದೇವಾಲಯದಲ್ಲಿ ಪ್ರಸಾದ ಸೇವಿಸಿ 60ಕ್ಕೂ ಹೆಚ್ಚು ಜನರು ಅಸ್ವಸ್ಥರಾದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಮಾನದಂಡ ಪಾಲಿಸುವಂತೆ ಆದೇಶಿಸಿದ್ದಾರೆ.



ಜಿಲ್ಲೆಯಲ್ಲಿ ನಡೆಯುವ ಸಾಮೂಹಿಕ ಧಾರ್ಮಿಕ ಹಾಗೂ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಪ್ರಸಾದ ಅಥವಾ ಭೋಜನ ವಿತರಣೆ ವೇಳೆ ಅಗತ್ಯ ಮುನ್ಸೂಚನೆ ಕೈಗೊಳ್ಳಬೇಕು. ಅಡುಗೆ ಕೋಣೆಗಳಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸಬೇಕು ಎಂದು ಹೇಳಿದ್ದಾರೆ.

ಜಾತ್ರೆ ಉತ್ಸವಗಳಲ್ಲಿ ಅನ್ನ ಸಂತರ್ಪಣೆ, ಪ್ರಸಾದ ವಿತರಣೆ, ಸರ್ಕಾರಿ ಹಾಸ್ಟೆಲ್‌ಗಳು, ವೃದ್ಧಾಶ್ರಮ, ಅನಾಥಾಶ್ರಮ, ಇತರೆ ಸರ್ಕಾರಿ ಸ್ವಾಯತ್ತ ಅಥವಾ ಖಾಸಗಿ ಸ್ಥಳಗಳಲ್ಲಿ ಕಾರ್ಯಕ್ರಮ ಆಯೋಜಿಸುವವರು ಅತ್ಯಂತ ಎಚ್ಚರ ವಹಿಸಬೇಕು. ಅಡುಗೆ ಕೋಣೆಗೆ ಅಪರಿಚಿತ ವ್ಯಕ್ತಿಗಳು ಪ್ರವೇಶಿಸದಂತೆ ನಿಗಾ ಇಡಬೇಕು. ಕೋಣೆಗಳಲ್ಲಿ ಗಾಳಿ ಮತ್ತು ಬೆಳಕಿನ ವ್ಯವಸ್ಥೆ ಮಾಡಿಕೊಳ್ಳಬೇಕು. ಬೆಂಕಿ ನಂದಿಸುವ ಯಂತ್ರದ ವ್ಯವಸ್ಥೆ ಇರಲೇಬೇಕು. ಊಟದ ಕೋಣೆಯಲ್ಲಿ ಕುಡಿಯಲು ಹಾಗೂ ಅಡುಗೆಗೆ ಬಳಸುವ ನೀರು ಶುದ್ಧವಾಗಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು. ಅಡುಗೆ ಮಾಡುವವರ ಹಾಗೂ ಸಹಾಯಕರು, ಊಟ ಬಡಿಸುವವರನ್ನು ನೇಮಕ ಮಾಡುವ ಮುನ್ನ ಕಡ್ಡಾಯವಾಗಿ ಆರೋಗ್ಯ ತಪಾಸಣೆ ಮಾಡಿಸಿ ನೇಮಕ ಮಾಡಿಕೊಳ್ಳಬೇಕು. ಅಡುಗೆ ತಯಾರಿಸುವಾಗ ಕೈಗವಚ, ತಲೆಟೋಪಿ, ಮುಂಗವಚ ಬಳಸಬೇಕು. ಜೊತೆಗೆ ಕೆಲಸಗಾರರ ಅಗತ್ಯ ದಾಖಲಾತಿ ಹೊಂದಿರಬೇಕೆಂದು ಅವರು ಹೇಳಿದ್ದಾರೆ.

### ಅನಧಿಕೃತ ವ್ಯಕ್ತಿಗಳ ತಡೆಯಿರಿ

ಅಡುಗೆ ಕೋಣೆಯಲ್ಲಿ ಅಡುಗೆ ತಯಾರಕರು ಮತ್ತು ಸಹಾಯಕರ ಗುರುತಿನ ಚೀಟಿ ಕಡ್ಡಾಯ ಮಾಡುವುದು. ಅಡುಗೆ ತಯಾರಾಗುವ ಸ್ಥಳದಲ್ಲಿ ಮದ್ಯಪಾನ, ಧೂಮಪಾನ ಮತ್ತು ತಂಬಾಕು ಬಳಕೆ ನಿಷೇಧಿಸಬೇಕು. ಪಾತ್ರೆ ತೊಳೆಯುವ ನೀರು, ಕೈ ತೊಳೆಯುವ ನೀರು ಮತ್ತು ತ್ಯಾಜ್ಯದ ನೀರು ಸಮರ್ಪಕವಾಗಿ ಹರಿದು ಹೋಗುವಂತೆ ವ್ಯವಸ್ಥೆ ಮಾಡಬೇಕು. ದಾಸ್ತಾನು ಕೊಠಡಿಯಲ್ಲಿ ದಿನಸಿ/ತರಕಾರಿ, ಆಹಾರ ಪದಾರ್ಥಗಳ ಹಾಗೂ ಪಾನೀಯ ಸ್ವಚ್ಛತೆಯನ್ನು ಕಾಪಾಡುವುದು. ಇಲಿ, ಹೆಗ್ಗಣ, ಹಲ್ಲಿ, ಬೆಕ್ಕು, ಇರುವೆ, ಹಾವು, ನಾಯಿಗಳು ಹಾಗೂ ಕ್ರಿಮಿಕೀಟಗಳ ಕಾಟವಿರದಂತೆ ನೋಡಿಕೊಳ್ಳಬೇಕು. ದಾಸ್ತಾನು ಕೊಠಡಿಯಲ್ಲಿ ಅಧಿಕೃತ ಸಿಬ್ಬಂದಿ ಹೊರತುಪಡಿಸಿ ಅನಧಿಕೃತ ವ್ಯಕ್ತಿಗಳು ಪ್ರವೇಶಿಸಿದಂತೆ ಕ್ರಮ ವಹಿಸಬೇಕೆಂದು ಸೂಚಿಸಿದ್ದಾರೆ.

ಜನಸಂದಣಿ ಸೇರುವ ಜಾಗದಲ್ಲಿ ಕಾರ್ಯಕ್ರಮ ಮಾಡುವಾಗ ಮುನ್ನೆಚ್ಚರಿಕೆ ಕ್ರಮವಾಗಿ ಪ್ರಥಮ ಚಿಕಿತ್ಸೆ ಪೆಟ್ಟಿಗೆ ಕೂಡಲೇ ಲಭ್ಯವಿರುವಂತೆ ವ್ಯವಸ್ಥೆ ಮಾಡಿಕೊಳ್ಳಬೇಕು. ಪಾತ್ರೆ ಪರಿಕರಗಳನ್ನು ಬಿಸಿ ನೀರಿನಲ್ಲಿ ಶುಚಿಗೊಳಿಸಬೇಕು. ತರಕಾರಿ, ಹಣ್ಣು-ಹಂಪಲು, ಸೊಪ್ಪು ಆಹಾರ ಧಾನ್ಯಗಳನ್ನು ಕಡ್ಡಾಯವಾಗಿ ದ್ರವ ಲವಣದ ನೀರಿನಿಂದ ಚೆನ್ನಾಗಿ ಶುದ್ಧ ನೀರಿನಲ್ಲಿ ಸ್ವಚ್ಛಗೊಳಿಸಬೇಕು. ಆಹಾರ ಪದಾರ್ಥಗಳ ಸರಬರಾಜು ಸಂದರ್ಭದಲ್ಲಿ ಕಲಬೆರಕೆ ಕಂಡುಬಂದರೆ ಆಹಾರ ಸುರಕ್ಷತಾಧಿಕಾರಿಗೆ ಮಾಹಿತಿ ನೀಡಬೇಕೆಂದು ಅವರು ಹೇಳಿದ್ದಾರೆ.

> ಸಾರ್ವಜನಿಕರಿಗೆ ಊಟ ಬಡಿಸುವ ಮೊದಲು ಆಯೋಜಕರು ಸೇವಿಸಬೇಕು. ಆಹಾರ ತಯಾರಿಸುವ ಸ್ಥಳದಲ್ಲಿ ಕಡ್ಡಾಯವಾಗಿ ಸಿಸಿಟಿವಿ ಕ್ಯಾಮರಾ ಅಳವಡಿಸಬೇಕೆಂದು ಹೇಳಿದ್ದಾರೆ. ಈ ಎಲ್ಲಾ ನಿಯಮ ಪಾಲಿಸದಿದರೆ ಸಂಬಂಧಪಟ್ಟ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು.
>
> **- ಕೆ.ಎಸ್. ಲತಾಕುಮಾರಿ, ಜಿಲ್ಲಾಧಿಕಾರಿ**

ಅನ್ನ ಸಂತರ್ಪಣೆಯ ಮೊದಲು ಹಾಗು ನಂತರ ಸ್ಥಳ ಶುಚಿಯಾಗಿಸಬೇಕು. ಶೌಚಾಲಯ ವ್ಯವಸ್ಥೆ ಇರುವಂತೆ ಕಾರ್ಯಕ್ರಮ ಆಯೋಜಕರು ಕಡ್ಡಾಯವಾಗಿ ವ್ಯವಸ್ಥೆಗೊಳಿಸಬೇಕು. ಲಘು ಉಪಾಹಾರ ಪದಾರ್ಥಗಳನ್ನು ಪ್ರಿಂಟೆಡ್ ಪೇಪರ್‌ನಲ್ಲಿ ದಾಸ್ತಾನು ಮಾಡದಂತೆ ಹಾಗು ಉಪಯೋಗಿಸದಂತೆ ಕ್ರಮ ವಹಿಸಬೇಕು. ತುಕ್ಕು ಹಿಡಿದ ಮೇಜು/ಟೇಬಲ್‌ಗಳ ಮೇಲೆ ಯಾವುದೇ ಕಾರಣಕ್ಕೂ ಊಟ ಉಪಾಹಾರ ಬಡಿಸಬಾರದು. ಕಡ್ಡಾಯವಾಗಿ ಎಫ್.ಎಸ್.ಎಸ್.ಎ ಪರವಾನಗಿ/ನೋಂದಣಿ ಪಡೆದ ಕ್ಯಾಟರಿಂಗ್ ಸಂಸ್ಥೆಗೆ ಆದ್ಯತೆ ನೀಡಬೇಕು. ದೇವಸ್ಥಾನ, ಅಂಗನವಾಡಿ, ಶಾಲೆ, ವಸತಿ ಶಾಲೆ, ಹಾಸ್ಟೆಲ್, ಕಾಲೇಜ್ ಕ್ಯಾಂಟೀನ್, ಕಾರಾಗೃಹ ಹಾಗು ಆಸ್ಪತ್ರೆ ಕ್ಯಾಂಟೀನ್‌ಗಳಲ್ಲಿಯೂ ಅಡುಗೆ ಮತ್ತು ಊಟದ ಕೊಠಡಿಯಲ್ಲಿ ಮೇಲ್ಕಂಡ ಅಂಶಗಳು ಕಡ್ಡಾಯವಾಗಿ ಪಾಲನೆಯಾಗುವಂತೆ ಸಂಬಂಧಪಟ್ಟ ಅಧಿಕಾರಿಗಳು ಗಮನ ಹರಿಸಬೇಕೆಂದು ಅವರು ನಿರ್ದೇಶನ ನೀಡಿದ್ದಾರೆ.

## ಫ.ಗು. ಹಳಕಟ್ಟಿ ಸಾಹಿತ್ಯ ಸೇವೆ ಸ್ಮರಣೀಯ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವಚನ ಸಾಹಿತ್ಯಕ್ಕೆ ಫ.ಗು. ಹಳಕಟ್ಟಿ ನೀಡಿರುವ ಕೊಡುಗೆ ಅಪಾರ ಎಂದು ಅಖಿಲ ಭಾರತ ವೀರಶೈವ ತಾಲ್ಲೂಕು ಮಹಿಳಾ ಘಟಕದ ಉಪಾಧ್ಯಕ್ಷೆ ಎಂ.ಬಿ. ಗಿರಿಜಾಂಬಿಕಾ ಹೇಳಿದರು.


ನಗರದ ಬಸವ ಕೇಂದ್ರದಲ್ಲಿ ಇತ್ತೀಚೆಗೆ ನಡೆದ ಅಖಿಲ ಭಾರತ ವೀರಶೈವ ಮಹಿಳಾ ಘಟಕ ಮಾಸಿಕ ಸಭೆ ಹಾಗೂ ಫ.ಗು. ಹಳಕಟ್ಟಿ ಅವರ ಜನ್ಮ ದಿನಾಚರಣೆಯಲ್ಲಿ ಮಾತನಾಡಿ, 1880ರಲ್ಲಿ ಧಾರವಾಡದಲ್ಲಿ ಜನಿಸಿದ ಅವರು ವೃತ್ತಿಯಲ್ಲಿ ವಕೀಲ, ಸಾಹಿತಿಯಾಗಿ ಕರ್ನಾಟಕದ ನೆಲ, ಜಲ, ಸಂಸ್ಕೃತಿಗಾಗಿ ವಿದ್ಯಾರ್ಥಿ ದಿನಗಳಿಂದಲೇ ಹೋರಾಟಕ್ಕೆ ಧುಮುಕಿದರು. ಕರ್ನಾಟಕ ಏಕೀಕರಣದ ಕ್ರಾಂತಿಗೆ ಆಲೂರು ವೆಂಕಟರಾಯರ ಸ್ಫೂರ್ತಿಯೊಂದಿಗೆ ದುಡಿದ ಮಹನೀಯ ಎಂದರು.

ಹಳ್ಳಿ ಹಳ್ಳಿಗೆ ಸೈಕಲ್‌ನಲ್ಲಿ ತಿರುಗಾಡಿ ಓಲೆಗರಿ, ತಾಳೆಗರಿ ಮತ್ತು ಹಸ್ತಪ್ರತಿಯಲ್ಲಿ ಇದ್ದ ವಚನಗಳನ್ನೆಲ್ಲ ಸಂಗ್ರಹಿಸಿದರು. ಈ ಕಾರ್ಯಕ್ಕಾಗಿ ಅವರು ತಮ್ಮ ಮನೆಯನ್ನು ಅಡವಿಟ್ಟು ಆರ್ಥಿಕ ವ್ಯವಸ್ಥೆ ಮಾಡಿಕೊಳ್ಳಬೇಕಾಯಿತು. ಸಾಲ ತೀರಿಸಲಾಗದ ಪರಿಸ್ಥಿತಿ ನಿರ್ಮಾಣವಾದಾಗ ಬ್ಯಾಂಕ್‌ನವರು ಮನೆ ಜಪ್ತಿಗೆ ಬಂದಾಗ ತರಳಬಾಳು ಮಠದ ಶ್ರೀಗಳು ಬಂಗಾರದ ಪದಕ ನೀಡಿ ಸನ್ಮಾನಿಸಿ ಆ ಪದಕದಿಂದ ಮನೆ ಉಳಿಸಿಕೊಳ್ಳಲು ನೆರವಾಗಿದ್ದರೆಂದು ಸ್ಮರಿಸಿದರು.

ಇಂದು ನಾವೆಲ್ಲರೂ ಶಿವಶರಣರ ವಚನಗಳನ್ನು ಓದುತ್ತಿದ್ದೇವೆ ಎಂದರೆ ಅದರ ಹಿಂದೆ ಫ.ಗು. ಹಳಕಟ್ಟಿ ಅವರ ಪರಿಶ್ರಮ ಸಾಕಷ್ಟಿದೆ. ಹಾಗಾಗಿ ಅವರು ನಮ್ಮೆಲ್ಲರಿಗೆ ನಿತ್ಯ ಸ್ಮರಣೀಯರು ಎಂದು ತಿಳಿಸಿದರು.

# ಜಿಲ್ಲೆಯಲ್ಲಿ ಮುಂದುವರಿದ ಕಳ್ಳತನ ಸರಣಿ

ಹಾಸನ: ಜಿಲ್ಲೆಯಲ್ಲಿ ಕಳ್ಳತನ ಪ್ರಕರಣಗಳು ಮುಂದುವರಿದಿದ್ದು ಅರಸೀಕೆರೆ ತಾಲ್ಲೂಕಿನ ಬೆಂಡೆಕೆರೆ ಸಮೀಪದ ಮೂಡಲಗಿರಿ ತಿಮ್ಮಪ್ಪ ದೇವಾಲಯದಲ್ಲಿ ಹುಂಡಿ ಕಳವು ಮಾಡಿದರೆ ಚನ್ನರಾಯಪಟ್ಟಣ ತಾಲ್ಲೂಕು ಗೌಡರಹಳ್ಳಿಯಲ್ಲಿ ಮನೆಗಳವು ಹಾಗೂ ಹೊಳೆನರಸೀಪುರದಲ್ಲಿ ಶುಂಠಿ ಚೀಲ ಕಳವು ಮಾಡಲಾಗದೆ.



ತಾಲ್ಲೂಕಿನ ಬೆಂಡೆಕೆರೆ ಸಮೀಪದ ತಿಮ್ಮಪ್ಪ ದೇವಾಲಯಕ್ಕೆ ಮಂಗಳವಾರ ರಾತ್ರಿ ನುಗ್ಗಿರುವ ಕಳ್ಳರು ಅಡುಗೆ ಮನೆಯ ಬೀಗ ಒಡೆದು ಅಲ್ಲಿದ್ದ ಗ್ಯಾಸ್ ಸಿಲಿಂಡರ್ ಬಳಸಿಕೊಂಡು, ಕ್ಯಾಸ್ ಕಟರ್ ಮೂಲಕ ದೇವಾಲಯದ ಮುಖ್ಯದ್ವಾರವನ್ನು ಒಡೆದು ಒಳ ಪ್ರವೇಶಿಸಿದ್ದಾರೆ. ಇದಕ್ಕೂ ಮುನ್ನ ದೇವಾಲಯದ ಆವರಣದಲ್ಲಿ ಅಳವಡಿಸಿದ್ದ ಸಿಸಿ ಕ್ಯಾಮೆರಾ ತಿರುಗಿಸಿ ಕಳವು ಕೃತ್ಯದಿಂದ ಬಚಾವಾಗಲು ಜಾಣ್ಮೆ ಪ್ರದರ್ಶಿಸಿದ್ದಾರೆ.

ದೇವಾಲಯ ಅಭಿವೃದ್ಧಿ ಸಮಿತಿ ಅಧ್ಯಕ್ಷ ನಾಗಭೂಷಣ್ ಮಾತನಾಡಿ, ಎಂದಿನಂತೆ ದೇವಾಲಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಬೀಗ ಒಡೆದಿರುವುದು ಕಂಡುಬಂತು. ಕೂಡಲೇ ವಿಷಯವನ್ನು ಪೊಲೀಸರಿಗೆ ಮುಟ್ಟಿಸಿದ್ದೇವೆ. ಅವರೂ ಸಹ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ ಎಂದರು.

ಹುಂಡಿಯಲ್ಲಿ 40-50 ಸಾವಿರ ಹಣ ಇತ್ತು ಎಂದಿರುವ ಅವರು, ದೇವಾಲಯದ ದ್ವಾರ, ಸಿಸಿ ಕ್ಯಾಮರಾ, ಅಡುಗೆ ಮನೆ ದ್ವಾರವನ್ನು ಕಳ್ಳರು ಮುರಿದು ಹಾಳು ಮಾಡಿದ್ದು ಲಕ್ಷಾಂತರ ನಷ್ಟ ಸಂಭವಿಸಿದೆ ಎಂದು ಮಾಹಿತಿ ನೀಡಿದರು.

### 22 ಚೀಲ ಒಣ ಶುಂಠಿ ಕಳವು

ಹೊಳೆನರಸೀಪುರ: ಘಟನೆ ತಾಲ್ಲೂಕಿನ ಜಾಂದಾಳ್ ವೃತ್ತದ ಗೋದಾಮಿನಲ್ಲಿಟ್ಟಿದ್ದ 22 ಚೀಲ ಒಣ ಶುಂಠಿ ಕಳವು ಮಾಡಲಾಗಿದೆ. ಹಳೇಕೋಟೆ ಹೋಬಳಿ ಜಾಂದಾಳ್ ಗ್ರಾಮದ ಶುಂಠಿ ವ್ಯಾಪಾರಿ ಜಾಬೀರ್ ಷರೀಫ್ ಅವರಿಗೆ ಸೇರಿದ ತಲಾ 60 ಕೆ.ಜಿ. ತೂಕದ 22 ಶುಂಠಿ ಚೀಲ ಕಳುವಾಗಿದ್ದು ಒಟ್ಟು ಮೌಲ್ಯ 1.45 ಲಕ್ಷ ರೂ. ಆಗಿದೆ. ಜು. 10 ರಂದು ಗೋದಾಮಿನಲ್ಲಿ ಶುಂಠಿ ದಾಸ್ತಾನು ಮಾಡಿ ತೆರಳಿದ್ದ ಅವರು ಜು. 15ರಂದು ಗೋದಾಮಿನ ಬಳಿ ಬಂದು ನೋಡಿದಾಗ ಶೆಲ್ಟರ್ ಬೀಗ ಮುರಿದು ಕಳ್ಳತನ ಮಾಡಿರುವುದು ಗೊತ್ತಾಗಿದೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### 6.34 ಲಕ್ಷ ರೂ. ಬೆಲೆಯ ಚಿನ್ನಾಭರಣ ಕಳವು

ಹಾಡಹಗಲೇ ಮನೆ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು ನಗದು ಸೇರಿ 6.34 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ಚನ್ನರಾಯಪಟ್ಟಣ ತಾಲ್ಲೂಕಿನ ಗೌಡರಹಳ್ಳಿ ಗ್ರಾಮದಲ್ಲಿ ನಡೆದಿದೆ. ಜು. 15ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ನಂಜಮ್ಮ ಅವರು ಬೀಗ ಹಾಕಿ ತೋಟದ ಕೆಲಸಕ್ಕೆ ತೆರಳಿದ್ದರು. ಮಧ್ಯಾಹ್ನ 1 ಗಂಟೆಗೆ ಬಂದು ನೋಡಿದಾಗ ಬಾಗಿಲು ಮುರಿದಿರುವುದು ತಿಳಿದಿದೆ.

# ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಆರಂಭಕ್ಕೆ ಆಗ್ರಹಿಸಿ ಪ್ರತಿಭಟನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ನಗರದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡ ಕಾಮಗಾರಿಯನ್ನು ಶೀಘ್ರದಲ್ಲೇ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು ಎಂದು ಆಗ್ರಹಿಸಿ ರಾಜ್ಯ ರೈತ ಸಂಘದಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಹೇಮಾವತಿ ಪ್ರತಿಮೆ ಬಳಿಯಿಂದ ಮೆರವಣಿಗೆಯಲ್ಲಿ ಬಂದ ಪ್ರತಿಭಟನಾಕಾರರು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ರೈತ ಸಂಘದ ಉಪಾಧ್ಯಕ್ಷ ಆನೇಕೆರೆ ರವಿ ಮಾತನಾಡಿ, ಜಿಲ್ಲೆಯಲ್ಲಿ ಹೃದಯಾಘಾತದಿಂದ ಹೆಚ್ಚು ಜನ ಸಾವಿಗೀಡಾಗಿದ್ದಾರೆ. ಹಿಮ್ಸ್ ಕರ್ನಾಟಕದಲ್ಲಿಯೇ 2ನೇ ಅತಿ ದೊಡ್ಡ ಆಸ್ಪತ್ರೆಯಾಗಿದೆ. ಆದರೆ ಜಿಲ್ಲೆಯ ರೋಗಿಗಳು ಬೆಂಗಳೂರು, ಮೈಸೂರು, ಮಂಗಳೂರು ಜಿಲ್ಲೆಗಳಿಗೆ ಹೋಗಬೇಕಾದ ಅನಿವಾರ್ಯತೆ ಎದುರಾಗಿದೆ. ಹೋಗುವಾಗಲೇ ಮಾರ್ಗ ಮಧ್ಯೆದಲ್ಲೇ ಹಲವರು ಸಾವಿಗೀಡಾಗುತ್ತಿದ್ದಾರೆ. ಅದರಿಂದ ಜಿಲ್ಲೆಯಲ್ಲಿ ಹೊಸ ಆಸ್ಪತ್ರೆ ಪ್ರಾರಂಭಗೊಂಡರೆ ರೈತರಿಗೆ, ಕಾರ್ಮಿಕರಿಗೆ, ಎಲ್ಲಾ ಬಡ ಜನರಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಆಸ್ಪತ್ರೆಯನ್ನು ಶೀಘ್ರವೇ ಉದ್ಘಾಟನೆ ಮಾಡಿ ಜಿಲ್ಲೆಯ ಬಡ ಜನರನ್ನು ಉಳಿಸುವ ಕಡೆ ಸರ್ಕಾರ ಗಮನ ಹರಿಸಬೇಕು. ಜಿಲ್ಲೆಯಲ್ಲಿ ದಿನಕ್ಕೆ 5 ರಿಂದ 10 ಸಾವುಗಳಾಗುತ್ತಿವೆ. ಕೆಲವು ಜನರ ಸಾವುಗಳು ಪ್ರಚಾರಕ್ಕೆ ಬರುತ್ತಿಲ್ಲ. ಇದನ್ನು ಮನಗಂಡು ರಾಜಕೀಯ ಮಾಡದೆ ಆದಷ್ಟು ಬೇಗನೆ ಒಗ್ಗಟ್ಟಿನಿಂದ ಆಸ್ಪತ್ರೆ ಉದ್ಘಾಟನೆ ಮಾಡಬೇಕೆಂದು ಮನವಿ ಮಾಡಿದರು.

ಕಳಪೆ ಬೀಜದಿಂದ ಜೋಳದ ಬೆಳೆಗಳು ನಾಶವಾಗಿದ್ದರಿಂದ ರೈತರು ಕಂಗಾಲಾಗಿದ್ದಾರೆ. ಸರ್ಕಾರ ಜೋಳದ ಬೆಳೆಗೆ ಸರಿಯಾದ ಪರಿಹಾರವನ್ನು ಶೀಘ್ರವೇ ಘೋಷಣೆ ಮಾಡಬೇಕು. ಜಿಲ್ಲೆಯಲ್ಲಿ ಖಾಸಗಿ ಫೈನಾನ್ಸ್‌ನವರು ರೈತರಿಗೆ ಮತ್ತು ಕಾರ್ಮಿಕರಿಗೆ ಸಾಲಕೊಟ್ಟು ವಸೂಲಿ ಮಾಡುವ ಸಂದರ್ಭದಲ್ಲಿ ಕಿರುಕುಳ ನೀಡುತ್ತಿರುವುದರಿಂದ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ರಾಷ್ಟ್ರೀಕೃತ ಬ್ಯಾಂಕ್‌ನವರು ರೈತರಿಗೆ ನೋಟೀಸ್ ನೀಡಿ ಕಿರುಕುಳ ನೀಡುತ್ತಿದ್ದಾರೆ. ಈ ಬಗ್ಗೆಯೂ ಸರ್ಕಾರ ಗಮನ ಹರಿಸಬೇಕೆಂದು ಒತ್ತಾಯಿಸಿದರು.

ರೈತ ಮುಖಂಡ ಜಯರಾಮ್ ಮಾತನಾಡಿ, ಜಿಲ್ಲೆಯಲ್ಲಿ ಮೆಕ್ಕೆಜೋಳಕ್ಕೆ ಬಿಳಿಸುಳಿ ರೋಗ ತಗುಲಿರುವುದರಿಂದ ಸಾವಿರಾರು ರೈತರು ಸಂಕಷ್ಟಕ್ಕೀಡಾಗಿದ್ದಾರೆ. ಪ್ರತಿ ಎಕರೆಗೆ 40 ರಿಂದ 50 ಸಾವಿರ ಖರ್ಚು ಮಾಡಿ ನಷ್ಟ ಅನುಭವಿಸುವಂತಿದ್ದು, ಸರ್ಕಾರ ಕೂಡಲೇ ರೈತರ ನೆರವಿಗೆ ಧಾವಿಸಬೇಕು. ಇಲ್ಲವಾದರೆ ವಿಧಾನಸೌಧಕ್ಕೆ ಮುತ್ತಿಗೆ ಹಾಕಲಾಗುವುದು ಎಂದು ಎಚ್ಚರಿಸಿದರು.

ರೈತ ಮುಖಂಡ ಚೆಲುವೇಗೌಡ ಮಾತನಾಡಿ, ಮೆಕ್ಕೆಜೋಳಕ್ಕೆ ಸರ್ಕಾರ ಪರಿಹಾರ ವಿತರಿಸಬೇಕು ಹಾಗು ಪರ್ಯಾಯಾ ಬೆಳೆ ಬೆಳೆಯಲು ಸೂಕ್ತ ಬಿತ್ತನೆ ಬೀಜಯನ್ನು ಕೃಷಿ ಇಲಾಖೆ ಮೂಲಕ ವಿತರಿಸಬೇಕು. ಇದರಿಂದ ಸಂಕಷ್ಟದಲ್ಲಿರುವ ರೈತರಿಗೆ ನೆರವಾಗಲಿದೆ ಎಂದು ಮನವಿ ಮಾಡಿದರು.

ಈಗಾಗಲೇ ಕೃಷಿ ಇಲಾಖೆಯಿಂದ ವಿತರಿಸಲಾಗಿರುವ ಮೆಕ್ಕೆಜೋಳ ಬಿತ್ತನೆ ಬೀಜ ಶೇ.80 ರಷ್ಟು ಬೆಳೆ ಬಿಳಿಸುಳಿ ರೋಗಕ್ಕೆ ತುತ್ತಾಗಿದೆ. ಆಲೂಗೆಡ್ಡೆ ಬೆಳೆ ಅಂಗಮಾರಿ ರೋಗಕ್ಕೆ ತುತ್ತಾದ ಹಿನ್ನಲೆ ಜಿಲ್ಲೆಯ ರೈತರು ಪರ್ಯಾಯವಾಗಿ ಮೆಕ್ಕೆಜೋಳ ಬೆಳೆಯಲು ಮುಂದಾಗಿದ್ದರು ಇದೀಗ ಆ ಬೆಳೆಗೂ ರೋಗ ಆವರಿಸಿದ್ದು ರೈತರು ಪರ್ಯಾಯ ಬೆಳೆ ಬೆಳೆಯಲು ಕೃಷಿ ಇಲಾಖೆಯಿಂದ ಸೂಕ್ತ ಮಾರ್ಗದರ್ಶನ ಹಾಗು ಸೌಲಭ್ಯ ಒದಗಿಸಬೇಕು ಎಂದು ಒತ್ತಾಯಿಸಿದರು.

ರೈತ ಮುಖಂಡರಾದ ಬಾಬು, ಮಹಮದ್ ಸಾಧಿಕ್, ನಾಗೇಶ್, ದಾಸೇಗೌಡ, ರಮೇಶ್, ಜಯಮ್ಮ, ಕೋಮಲಾ, ಪವಿತ್ರ, ಮಹೇಶ್, ಪರಮೇಶ್ ಹಾಜರಿದ್ದರು.

# ಥಾಯ್ ಹೈಬ್ರಿಡ್ ಹಲಸಿಗೆ ಮೊರ ಹೋದ ರೈತರು



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಳೇಬೀಡು: ಹಳೇಬೀಡು ಭಾಗದಲ್ಲಿ ಬೇಗ ಫಸಲು ಕೊಡುವ ಅಧಿಕ ಇಳುವರಿಯ ಥಾಯ್ ಹೈಬ್ರಿಡ್ ಹಲಸಿನ ಗಿಡಗಳನ್ನು ರೈತರು ನಾಟಿ ಮಾಡುತ್ತಿದ್ದಾರೆ.

ಕೇರಳದ ಫ್ಲೋರಿಜಾ ಕಂಪೆನಿ ಜೊತೆ ಮರು ಬೈ ಬ್ಯಾಕ್ ಒಪ್ಪಂದ ಮಾಡಿಕೊಂಡು ರೈತರು ಹಲಸು ಕೃಷಿಯತ್ತ ಹೆಜ್ಜೆ ಹಾಕಿದ್ದಾರೆ. ಹಲಸಿನ ಬೆಳೆಗಾರರಿಗೆ ಕಾರ್ಬನ್ ಪ್ರಮಾಣ ಪತ್ರವನ್ನು ವಾಯು ಮಾಲಿನ್ಯ ಇಲಾಖೆಯಿಂದ ಪಡೆಯಬಹುದು. ಕಾಯಿ ಹಾಗೂ ಹಣ್ಣಿನಿಂದ ವಿವಿಧ ಖಾದ್ಯ ತಯಾರಿಸಬಹುದು. ಕರಾವಳಿ ಜಿಲ್ಲೆಗಳಲ್ಲಿ ಹಲಸನ್ನು ವಿವಿಧ ರೀತಿಯಲ್ಲಿ ಸೇವನೆ ಮಾಡಿ ಆರೋಗ್ಯ ಪಡೆಯುತ್ತಿದ್ದಾರೆ ಎಂದು ರೈತ ರವಿ ತಿಳಿಸಿದರು.

ಎರಡು ಎಕರೆ ಜಮೀನಿನಲ್ಲಿ ಹಲಸಿನ ಕೃಷಿ ಕೈಗೊಂಡಿದ್ದೇವೆ. ಎಕರೆಗೆ 300 ಗಿಡ ನಾಟಿ ಮಾಡಬಹುದು ಎಂದು ಕಂಟನಿಯವರು ಹೇಳುತ್ತಾರೆ. ಜಮೀನಿನಲ್ಲಿ ಮಾವಿನ ಮರಗಳು ಇರುವುದರಿಂದ 480 ಗಿಡಗಳನ್ನು ನಾಟಿ ಮಾಡಿದ್ದೇವೆ ಎನ್ನುತ್ತಾರೆ ಬೆಳೆಗಾರ ಅಶೋಕ್.

ಹಲಸು ಬೆಳೆಯುವ ಎಲ್ಲ ರೈತರು ಎನ್.ಆರ್.ಇ.ಜಿ. ಸೌಲಭ್ಯ ಪಡೆಯಬಹುದು. ಹಲಸು ಬೆಳೆಗಾರರು ತಮ್ಮ ವ್ಯಾಪ್ತಿಯ ಸಹಾಯ ತೋಟಗಾರಿಕಾ ಅಧಿಕಾರಿಗಳಿಂದ ಸಲಹೆ ಸೂಚನೆ ಪಡೆಯಬಹುದು ಎಂದು ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕ ಕೆ.ಬಿ. ಸತೀಶ್ ತಿಳಿಸಿದರು.

ಕಾರ್ಮಿಕರ ಸಮಸ್ಯೆಯಿಂದ ಅಲ್ಪಾವಧಿ ಕೃಷಿ ಕಷ್ಟವಾಗುತ್ತಿದೆ. ಕಂಟನಿ ಮಾರುಕಟ್ಟೆ ವ್ಯವಸ್ಥೆ ಮಾಡಿಕೊಡುವ ಭರವಸೆ ಕೊಟ್ಟಿರುವುದರಿಂದ ಹಲಸಿನ ಕೃಷಿಗೆ ಕೈಹಾಕಲಾಗಿದೆ ಎಂದು ರೈತ ಅಶೋಕ್ ಹೇಳಿದರು.

ಹಲಸಿನ ಕಾಯಿ ಸಂಗ್ರಹಣೆ ಹಾಗೂ ಪೌಡರ್ ಉತ್ಪಾದಿಸುವ ಘಟಕಗಳನ್ನು ಹೆಚ್ಚು ಬೆಳೆಗಾರರು ಇರುವ ಜಿಲ್ಲೆಗಳಲ್ಲಿ ಆರಂಭಿಸುವ ಗುರಿಯನ್ನು ಕಂಪನಿ ಹೊಂದಿದೆ. ಇದರಿಂದ ಉದ್ಯೋಗವಾಕಾಶ ಹೆಚ್ಚಲಿದೆ ಎನ್ನುತ್ತಾರೆ ಫ್ಲೋರಿಜಾ ಕಂಪನಿ ಯೋಜನಾ ವ್ಯವಸ್ಥಾಪಕ ನಟರಾಜ್.

# ಆರೋಗ್ಯವಂತರು ತಪ್ಪದೇ ರಕ್ತದಾನ ಮಾಡಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ರಕ್ತಕ್ಕೆ ಪರ್ಯಾಯ ಇಲ್ಲದಿರುವುದರಿಂದ ಆರೋಗ್ಯವಂತರು ಪ್ರತಿ ಮೂರು ತಿಂಗಳಿಗೊಮ್ಮೆ ರಕ್ತದಾನ ಮಾಡುವ ಮೂಲಕ ಇತರರಿಗೆ ನೆರವಾಗಬೇಕು ಎಂದು ತಾಲ್ಲೂಕು ರೆಡ್ ಕ್ರಾಸ್ ಸಭಾಪತಿ ಕೆ.ಎನ್. ಕಾಂತರಾಜು ಸಲಹೆ ನೀಡಿದರು.

ತಾಲ್ಲೂಕು ರೆಡ್ ಕ್ರಾಸ್ ಘಟಕ, ರಾಯರ ಕೊಪ್ಪಲು ಪ್ರಾಥಮಿಕ ಆರೋಗ್ಯ ಕೇಂದ್ರ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ರಕ್ತ ನಿಧಿ ವಿಭಾಗ ಸಂಯುಕ್ತಾಶ್ರಯದಲ್ಲಿ ವಿಶ್ವ ರಕ್ತದಾನಿಗಳ ದಿನದ ಅಂಗವಾಗಿ ರಾಯರಕೊಪ್ಪಲು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಏರ್ಪಡಿಸಿದ್ದ ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಭಾರತೀಯ ರೆಡ್ ಕ್ರಾಸ್ ಸಹಯೋಗದಲ್ಲಿ ಆಗಾಗ ರಕ್ತದಾನ ಶಿಬಿರ ಏರ್ಪಡಿಸುತ್ತೇವೆ. ಕಳೆದ ಎರಡು ವರ್ಷಗಳಿಂದ ಸರ್ಕಾರಿ ಆಸ್ಪತ್ರೆಯ ಸಹಯೋಗದಲ್ಲಿ ಈ ಶಿಬಿರವನ್ನು ಏರ್ಪಡಿಸುತ್ತಿದ್ದು ಇನ್ನು ಮುಂದೆ ಬಡವರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸರ್ಕಾರಿ ಆಸ್ಪತ್ರೆಗಳ ಸಹಯೋಗದಲ್ಲಿ ಈ ಶಿಬಿರಗಳನ್ನು ಮುಂದುವರಿಸಿಕೊಂಡು ಹೋಗುವುದಾಗಿ ತಿಳಿಸಿದರು.

ರಾಯರ ಕೊಪ್ಪಲು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಸಾಗರ್ ಮಾತನಾಡಿ, ಆರೋಗ್ಯವಂತ ವ್ಯಕ್ತಿಯು ದಾನ ಮಾಡುವ ಪ್ರತಿ ಹನಿ ರಕ್ತವು ಇನ್ನೊಬ್ಬ ವ್ಯಕ್ತಿಯ ಜೀವ ಉಳಿಸುವ ಅಮೃತಕ್ಕೆ ಸಮವಾಗಿದೆ. ಆರೋಗ್ಯವಂತ ವ್ಯಕ್ತಿಗಳು ಮತ್ತೊಬ್ಬರ ಜೀವ ಉಳಿಸಲು ರಕ್ತದಾನದ ಮೂಲಕ ಬಾಳಿಗೆ ಬೆಳಕಾಗಬೇಕು ಎಂದರು.

ರೆಡ್‌ಕ್ರಾಸ್ ಸಂಸ್ಥೆ ಕಾರ್ಯದರ್ಶಿ ವೀರಭದ್ರಸ್ವಾಮಿ ಮಾತನಾಡಿ, ಒಬ್ಬ ಆರೋಗ್ಯವಂತ ವ್ಯಕ್ತಿ ವರ್ಷದಲ್ಲಿ 4 ಬಾರಿ ರಕ್ತದಾನ ಮಾಡಬಹುದು ಎಂದರು. ಇದೆ ಸಂದರ್ಭದಲ್ಲಿ ಸಾರ್ವಜನಿಕರಿಂದ 37 ಯೂನಿಟ್ ರಕ್ತವನ್ನು ಸಂಗ್ರಹಿಸಲಾಯಿತು.

ತಾಲ್ಲೂಕು ರೆಡ್ ಕ್ರಾಸ್ ಪದಾಧಿಕಾರಿಗಳಾದ ಶಶಿಧರ್ ಬೆಕ್ಕಡಿ, ಅಜರುದ್ದಿನ್, ಧರ್ಮಣ್ಣ, ಪ್ರವೀಣ್, ವೈದ್ಯಕೀಯ ಸಿಬ್ಬಂದಿಗಳಾದ ಡಾ. ಭರತ್, ಲೀಲಾವತಿ, ಸುಪ್ರಿಯಾ, ಮಂಜುನಾಥ್, ದಿವಾಕರ್, ಕೋಮಲ, ರವಿ ಉಪಸ್ಥಿತರಿದ್ದರು.

# ರಸ್ತೆ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲು ಮನವಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ನಗರದ ಪ್ರಮುಖ ರಸ್ತೆಗಳಲ್ಲಿ ಸೃಷ್ಟಿಯಾಗಿರುವ ಅಪಾಯಕಾರಿ ಗುಂಡಿಗಳನ್ನು ಮುಚ್ಚಿ, ಹಂಪ್ಸ್, ಬೀದಿ ದೀಪಗಳು ಹಾಗೂ ಸಿಗ್ನಲ್ ಲೈಟ್ಸ್ ಅಳವಡಿಸುವಂತೆ ಒತ್ತಾಯಿಸಿ ನವಕರ್ನಾಟಕ ಯುವಶಕ್ತಿ ಸಂಘಟನೆ ಕಾರ್ಯಕರ್ತರು ಲೋಕೋಪಯೋಗಿ ಇಲಾಖೆಗೆ ಮನವಿ ಸಲ್ಲಿಸಿದರು.

ನಗರದ ಕೆಲವು ರಸ್ತೆಗಳಲ್ಲಿ ವೈಜ್ಞಾನಿಕವಾಗಿ ಹಂಪ್ಸ್‌ಗಳನ್ನು ಹಾಕದೇ ಇರುವುದಿಂದ ಅಪಘಾತಗಳು ಸಂಭವಿಸುತ್ತಿವೆ. ಮತ್ತೆ ಕೆಲವೆಡೆ ಬೀದಿ ದೀಪಗಳಿಲ್ಲದೆ ರಾತ್ರಿ ವೇಳೆ ಸಂಚರಿಸುವ ವಾಹನ ಸವಾರರು ಹಾಗೂ ಪಾದಚಾರಿಗಳಿಗೆ ತೊಂದರೆಯಾಗುತ್ತಿದೆ. ಅಗತ್ಯವಿರುವ ಕಡೆಗಳಲ್ಲಿ ಟ್ರಾಫಿಕ್ ಸಿಗ್ನಲ್ ಲೈಟ್‌ಗಳೂ ಇಲ್ಲದೆ ಸಮಸ್ಯೆಗಳಾಗುತ್ತಿದೆ. ಗುಂಡಿಬಿದ್ದ ರಸ್ತೆಗಳನ್ನು ಕುಡಲೇ ಸರಿಪಡಿಸಲು ಕ್ರಮ ಕೈಗೊಳ್ಳಬೇಕು ಎಂದು ಲೋಕೋಪಯೋಗಿ ಇಲಾಖೆ ಅಧಿಕ್ಷಕಿ ನಳಿನಿ ಅವರಿಗೆ ಮನವಿ ಮಾಡಿದರು.

ಸಂಘಟನೆಯ ಉದ್ಯಮ ಘಟಕದ ರಾಜ್ಯಧ್ಯಕ್ಷ ಸಂದೇಶ್‌ಶೆಟ್ಟಿ ಮಾತನಾಡಿ, ನಗರದ ಹಲವು ರಸ್ತೆಗಳಲ್ಲಿ ಹಪ್ಸ್‌ಗಳಿಲ್ಲ. ರಿಫ್ಲೆಕ್ಟರ್‌ಗಳಿಲ್ಲದೇ ರಾತ್ರಿ ಹೊತ್ತು ಬೈಕ್ ಸವಾರರು ತೊಂದರೆ ಅನುಭವಿಸುತ್ತಿದ್ದಾರೆ. ಬಿ.ಎಂ.ರಸ್ತೆ, ಸರಸ್ವತಿಪುರಂ, ರಾಯಲ್ ಅಪೋಲೋ ಶಾಲೆ, ಚಿಕ್ಕಕೊಂಡಗೊಳ, ಬಿಟ್ಟಗೌಡನಹಳ್ಳಿ ರಸ್ತೆ ಹಾಗು ಸುತ್ತಮುತ್ತಲ ಮುಖ್ಯ ರಸ್ತೆಯ ಕೆಲವು ಕಡೆಗಳಲ್ಲಿ ಸರಿಯಾದ ಬೆಳಕಿನ ವ್ಯವಸ್ಥೆ ಇಲ್ಲದಿರುವುದರಿಂದ ರಸ್ತೆ ದಾಟುವವರಿಗೆ ಕಷ್ಟವಾಗುತ್ತಿದೆ. ಈ ಬಗ್ಗೆ ಕೂಡಲೇ ಗಮನ ಹರಿಸಿದರೆ ಮುಮದೆ ಆಗಬಹುದಾದ ಅನಾಹುತಗಳನ್ನಾದರೂ ತಪ್ಪಿಸಬಹುದು ಎಂದರು.

ನಮ್ಮ ಕೋರಿಕೆಗಳ ಬಗ್ಗೆ ಗಮನಹರಿಸಿ ಅವ್ಯವಸ್ಥೆ ಸರಿಪಡಿದುವುದಾಗಿ ಲೋಕೋಪಯೋಗಿ ಅಧೀಕ್ಷಕರು ಭರವಸೆ ನೀಡಿದ್ದಾರೆ. ಅವರ ಸಲಹೆಯತೆ ಟ್ರಾಫಿಕ್ ಇನ್ಸ್‌ಪೆಕ್ಟರ್ ದಯಾನಂದ್ ಅವರಿಗೂ ಮನವಿ ಸಲ್ಲಿಸಿದ್ದೇವೆ. ಸಾರ್ವಜನಿಕರಿಂದ ದೂರು ಬಂದ ಕುಡಲೇ ಸಂಬಂಧಿಸಿದ ಅಧಿಕಾರಿಗಳು ಸ್ಪಂದಿಸಿದರೆ ಎಷ್ಟೋ ಸಮಸ್ಯೆಗಳು ಬಗೆಹರಿಯುತ್ತವೆ ಎಂದರು.

ನವಕರ್ನಾಟಕ ಯುವ ಶಕ್ತಿ ಸಂಘಟನೆಯ ರಾಜ್ಯ ಉಪಾಧ್ಯಕ್ಷ ಶಂಕರಗೌಡ, ಜಿಲ್ಲಾಧ್ಯಕ್ಷ ಕೆ.ವಿ.ನಂದೀಶ್, ತುಷಾರ್, ಸಂತೋಷ್ ಗೌಡ, ರವಿರಾಜಶೆಟ್ಟಿ, ಪ್ರಭಾಕರ್ ಶೆಟ್ಟಿ ಇದ್ದರು.

# ಕಾಂತರಾಜ ಪುರ ಗ್ರಾ.ಪಂ.ಗೆ ಅಮೃತಶಿಲ್ಪ ಅಧ್ಯಕ್ಷೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ತಾಲ್ಲೂಕಿನ ಕಾಂತರಾಜುಪುರ ಗ್ರಾಮ ಪಂಚಾಯಿತಿಗೆ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಮೃತಶಿಲ್ಪ ಶಿವರಾಜ್ ಅವಿರೋಧ ಆಯ್ಕೆಯಾಗಿದ್ದಾರೆ.

18 ಸದಸ್ಯ ಬಲದ ಗ್ರಾಮ ಪಂಚಾಯಿತಿಯ ಹಿಂದಿನ ಅಧ್ಯಕ್ಷೆ ರತ್ನಮ್ಮ ದೇವರಾಜ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಮಂಗಳವಾರ ಚುನಾವಣೆ ಪ್ರಕ್ರಿಯೆ ನಡೆಯಿತು. ಚುನಾವಣಾಧಿಕಾರಿ ಹರೀಶ್ ಅವಿರೋಧ ಆಯ್ಕೆ ಪ್ರಕಟಿಸಿದರು.

ನೂತನ ಅಧ್ಯಕ್ಷೆ ಅಮೃತಶಿಲ್ಪ ಮಾತನಾಡಿ, ಸಾಮಾನ್ಯ ಮಹಿಳೆಗೆ ಮೀಸಲಾಗಿದ್ ಸ್ಥಾನಕ್ಕೆ ದಲಿತ ಮಹಿಳೆಯಾದ ನನ್ನನ್ನು ಅವಿರೋಧ ಆಯ್ಕೆಗೆ ಸಹಕರಿಸಿದ ಶಾಸಕ ಸಿ.ಎನ್. ಬಾಲಕೃಷ್ಣ ಹಾಗೂ ಎಲ್ಲ ಸದಸ್ಯರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಇದರಿಂದ ರಾಜಕೀಯವಾಗಿ ಸಾಮಾಜಿಕ ನ್ಯಾಯ ಒದಗಿಸಿದಂತಾಗಿದೆ ಎಂದರು.

ಬಡವರು ಹಾಗೂ ದೀನದಲಿತರ ಸಮಸ್ಯೆಗಳ ಪರಿಹಾರಕ್ಕಾಗಿ ಶ್ರಮಿಸುತ್ತೇನೆ. ಪಕ್ಷಾತೀತ ನೆಲೆಯಲ್ಲಿ ಅಭೀವೃದ್ಧಿ ಕಾರ್ಯಗಳನ್ನು ಹಂತ ಹಂತವಾಗಿ ಕೈಗೊಳ್ಳುತ್ತೇವೆ. ಎಲ್ಲಾ ಸದಸ್ಯರ ಪರಸ್ಪರ ಸಹಕಾರ ಮನೋಭಾವದಿಂದ ಕೆಲಸ ಮಾಡಿದರೆ ಸಾಕಷ್ಟು ಅಭಿವೃದ್ಧಿ ಸಾಧಿಸಿ ಮಾದರಿ ಗ್ರಾಮ ಪಂಚಾಯಿತಿಯನ್ನಾಗಿ ರೂಪಿಸಬಹುದು ಎಂದು ಹೇಳಿದರು.

ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಪರಮ ದೇವರಾಜೇಗೌಡ, ಮಾಜಿ ಅಧ್ಯಕ್ಷರಾದ ಬರಾಳು ಮಹೇಂದ್ರ, ಕಾರ್ತಿಕ್, ಉಪಾಧ್ಯಕ್ಷೆ ಮಮತಾ ರಾಣಿ, ಮುಖಂಡರಾದ ವಡ್ಡರಹಳ್ಳಿ ರಾಜಣ್ಣ, ಶ್ರೀರಂಗ, ಸೂರಣ್ಣ, ಎಂ.ಎನ್. ಮಹೇಶ್, ಚಿಕ್ಕಬಿಳ್ತಿ ಗಂಗಾಧರ್, ಜಗದೀಶ್, ಎಂ.ಡಿ. ನಾರಾಯಣ್, ರವೀಶ್, ನಾಗೇಶ್, ಪ್ರಕಾಶ್, ಗುರು, ಕೃಪಾಕರ್, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸುಮನ್ ಮುಂತಾದವರಿದ್ದರು.

# ಸಕಲ ಪಾತ್ರಧಾರಿ ಪಟ್ನದ ವೆಂಕಟೇಗೌಡ್ರು

– ಗೊರೂರು ಅನಂತರಾಜು



ನಾನು ಮೊದಲು ಸಣ್ಣದಾಗಿಯೇ ಇದ್ದೆ. ಈಗ ಸ್ವಲ್ಪ ದಪ್ಪಗಾಗಿರುವೆ ಅದಕ್ಕೆ ನನಗೆ ಭೀಮ ಕುಂಭಕರ್ಣ, ಯಮನ ಪಾತ್ರಗಳು ಮೀಸಲು ಎಂದು ಮೀಸೆ ತಿರುವಿದರು ವೆಂಕಟೇಗೌಡರು. ಪಟ್ನದಲ್ಲಿ ನಾಟಕ ಮಾಡಿಕೊಂಡಿದ್ದವರನ್ನು ಪಟ್ಟಣಕ್ಕೆ ಕರೆತಂದವರು ಹಾರ್ಮೋನಿಯಂ ಮಾಸ್ಟರ್ ಎ.ಸಿ.ರಾಜು. ನಿಮ್ಮ ಪಟ್ನ ಎಲ್ಲಿದೆ ರಾಜೇಗೌಡ್ರೇ (ಇವರ ಇನ್ನೊಂದು ಹೆಸರು) ಎಂದರೆ ಸಾರ್, ನಮ್ಮೂರು ಆಲೂರುಗೆ 5 ಕಿ.ಮೀ. ದೂರದಲ್ಲಿದೆ. ಕದಾಳು ಗ್ರಾಮ ಪಂಚಾಯ್ತಿಗೆ ಸೇರಿದೆ. 65 ಮನೆ 400 ಜನಸಂಖ್ಯೆ ಇದೆ ಎಂದರು. ದಿ. 1-1-1964ರಲ್ಲಿ ಜನಿಸಿದ ಇವರ ತಂದೆಯ ಹೆಸರು ವೆಂಕಟೇ ಗೌಡ. ತಾಯಿ ಜಯಮ್ಮ. ಊರಲ್ಲಿ ಇರುವ ಹೆಂಚಿನ ಮನೆಯ ರಾಮಮಂದಿರ ನಮಗೆ ಆಭ್ಯಾಸದ ಮನೆ. ಊರಲ್ಲಿ ರಾಮನ ದೇವಸ್ಥಾನ ಕಟ್ಟುವ ನಮ್ಮ ಊರವರ ಆಸೆ ಇನ್ನೂ ಕೈಗೂಡಿಲ್ಲ ಎಂದರು. 50 ವರ್ಷಗಳಿಂದ ನಮ್ಮೂರಲ್ಲಿ ನಾಟಕ ಕಲಿಯುತ್ತಿದ್ದಾರೆ ಎನ್ನುವ ಇವರು 9ನೇ ಕ್ಲಾಸ್ ಓದುವಾಗಲೇ ಭೀಷ್ಮನ ಪಾತ್ರದಲ್ಲಿ ರಂಗಪ್ರವೇಶಿಸಿ ಮುಂದೆಯೂ ರಂಗದಲ್ಲಿ ಮುಂದುವರಿಯುವ ಶಪಥ ಮಾಡಿದರು. ಕಿರಗಡಲು ಸಣ್ಣಪ್ಪನವರ ನಿರ್ದೇಶನದಲ್ಲಿ ಊರಲ್ಲಿ ನಡೆದ ರಾಮಾಯಣದಲ್ಲಿ ಕೈಕೆ ಪಾತ್ರಕ್ಕೆ ಬಣ್ಣ ಹಚ್ಚಿದಾಗ ಹತ್ತನೇ ಕ್ಲಾಸ್. ಅರಕಲಗೂಡು ತಿಮ್ಮಾಚಾರ್ ನಿರ್ದೇಶನದಲ್ಲಿ ಕುರುಕ್ಷೇತ್ರ ನಾಟಕದಲ್ಲಿ ಅಭಿಮನ್ಯು ಪಾತ್ರ ಮಾಡಿದಾಗ ವಯಸ್ಸು ಇಪ್ಪತ್ತು. ತಮ್ಮ ನೇತೃತ್ವದಲ್ಲಿ 3 ವರ್ಷ ನಾಟಕ ಆಡಿಸಿದ್ದಾಗಿ ಹೇಳಿದರು. ರಾಜ ಸತ್ಯವ್ರತ ನಾಟಕದಲ್ಲಿ 3 ಬಾರಿ ಸತ್ಯವ್ರತ, ಶನಿದೇವರು, ಯಮನಾಗಿ ನಟಿಸಿದ್ದಾರೆ. ಮಗ್ಗೆ, ಮೇರ್ವೆಯಲ್ಲಿ 3 ಬೈರಾಪುರದಲ್ಲಿ 4 ಬಾರಿ ಭೀಮನ ಪಾತ್ರ ನಿರ್ವಹಿಸಿದ್ದಾರೆ. 24 ಹಳ್ಳಿಗಳು ಸೇರಿ ನಡೆಯುವ ಬೆಟ್ಟದಳ್ಳಿ ರಂಗನಾಥ ಸ್ವಾಮಿಬೆಟ್ಟದ ಜಾತ್ರೆಯಲ್ಲಿ 2 ಬಾರಿ ನಟಿಸಿದ್ದಾರೆ. ಹಳ್ಳಿಯ ನಟರನ್ನು ಸಿಟಿಯಲ್ಲಿ ಮೆರೆಸಿದ ಎ.ಸಿ.ರಾಜು ನಿರ್ದೇಶನದಲ್ಲಿ 15 ಬಾರಿ ಭೀಮನ ಪಾತ್ರದಲ್ಲಿ ಹಾಸನ, ಚಾಮರಾಜನಗರ, ಮೈಸೂರು, ಮಂಡ್ಯ ಕಡೆ ಹೋಗಿ ಪ್ರತಿಭೆ ತೋರಿದ್ದಾರೆ. ಹಾಸನ ಶ್ರೀ ಶಾರದ ಕಲಾಸಂಘದ ಅಧ್ಯಕ್ಷರು ಹೆಚ್.ಜಿ. ಗಂಗಾಧರ್ ನನಗೆ ಹೆಚ್ಚಿನ ಅವಕಾಶ ಕೊಟ್ಟಿದ್ದಾರೆ ಎಂದರು. ದಬ್ಬೆಘಟ್ಟ ಮಂಜುನಾಥ್ ನಿರ್ದೇಶನದಲ್ಲಿ 5 ಬಾರಿ ಭೀಮನಾಗಿ ಗದೆ ತಿರುಗಿಸಿದ್ದಾರೆ. ಸಾರ್, ಈ ನಟಿಯರು ಇದ್ದರಲ್ಲಾ ಒಂದು ನಾಟಕದಲ್ಲಿ ಮೂರ್ನಾಲ್ಕು ಪಾತ್ರಗಳಿಗೆ ಒಪ್ಪಿಕೊಂಡು, ಭೀಮನ ಕೈಗೆ ಹಗ್ಗ ಕಟ್ಟುವ ಸನ್ನಿವೇಶದಲ್ಲಿ ಅವರು ಡ್ರೆಸ್ ಬದಲಾಯಿಸಿ ದ್ರೌಪದಿ ವೇಷದಲ್ಲಿ ಬರುವುದಕ್ಕೆ ತಡಮಾಡಿ ಅಥವಾ ಬಾರದೇ ಎಷ್ಟು ಕಷ್ಟ ಕೊಟ್ಟಿದ್ದಾರೆ ಎಂದರೆ..! ಅವರ ಮನದಲ್ಲಿ ಸಿಟ್ಟಿದ್ದರೂ ತಾಳ್ಮೆಯಿಂದಲೇ ಒಪ್ಪಿಸಿದರು. ಸೀಗೆನಾಡು ಹೆಚ್.ಎಲ್. ಪಾಲಾಕ್ಷಾಚಾರ್, ಹಾಸನದ ಹೇಮಂತಚಾರ್, ಸಚಿನ್ ಚನ್ನರಾಯಪಟ್ಟಣ, ಬೆಳ್ಳೂರು ಕ್ರಾಸ್ ಅಶ್ವಥ್ ಇವರ ನಿರ್ದೇಶನದಲ್ಲಿ ಕುಂಭಕರ್ಣನಾಗಿ ರಾವಣ ದರ್ಬಾರ್ ದೃಶ್ಯದಲ್ಲಿ ಮೆರೆದಿದ್ದಾರೆ. ಬೆಂಗಳೂರು ಪಿಣ್ಯ ದಾಸರಹಳ್ಳಿ ಮಹೇಶ್ವರಿ ದೇವಸ್ಥಾನ ಜಾತ್ರೆಯಲ್ಲಿ ಕಲ್ಲೂರು ಶ್ರೀನಿವಾಸ ನಿರ್ದೇಶನದಲ್ಲಿ ನಟಿಸಿದನ್ನೂ ಸ್ಮರಿಸಿದರು. ಊರಲ್ಲಿ ವ್ಯವಸಾಯ ಜೊತೆಗೆ ಒಂದು ಆಟೋ ಇಟ್ಟಿದ್ದಾರೆ. ನಾಟಕ ನೋಡಲು ಪ್ರಾಕ್ಟಿಸ್ ಮಾಡಲು ಇದರಲ್ಲೇ ಬರುವ ಇವರಿಗೆ ನಾಟಕ ಎಂದರೆ ಪಂಚಪ್ರಾಣ.

## ಇತಿಹಾಸದಲ್ಲಿ ಈ ದಿನ

### ಜುಲೈ -17

1917: ಎಲ್ಲಿ ಬ್ಲಿಂಡ್ ಶಾಲೆಯನ್ನು ಆರಂಭಿಸಿದ್ದ ಹೆಸರಾಂತ ಸಮಾಜ ಸೇವಕಿ ಆನಿ ಬೆಸೆಂಟ್ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾದರು.

1996: ಸಚಿನ್ ತೆಂಡೂಲ್ಕರ್ ಮೊದಲ ಬಾರಿಗೆ ಭಾರತ ಕ್ರಿಕೆಟ್ ತಂಡದ ನಾಯಕನಾಗಿ ನೇಮಕಗೊಂಡರು.

2019: ಕರ್ನಾಟಕದಲ್ಲಿ ರಾಜಕೀಯ ಬಿಕ್ಕಟ್ಟು ತೀವ್ರವಾದ ದಿನ. ಹಲವಾರು ಶಾಸಕರು ರಾಜೀನಾಮೆ ನೀಡಿ ಸರ್ಕಾರದ ಭವಿಷ್ಯ ಪ್ರಶ್ನೆಯಾಗಿ ಪರಿಣಮಿಸಿತು.

1453: ಫ್ರಾನ್ಸ್‌ನ ಕಾಸ್ಟಿಲ್ಲಾನ್ ಯುದ್ಧದಲ್ಲಿ ಇಂಗ್ಲೆಂಡ್ ಸೋತು, ಶತಮಾನದ ಯುದ್ಧ ಅಂತ್ಯವಾಯಿತು.

1717: ಲಂಡನ್‌ನಲ್ಲಿ ಮೊದಲ ಫ್ರೀಮೇಸನ್ ಗ್ರ್ಯಾಂಡ್ ಲಾಜ್ ಸ್ಥಾಪನೆಯಾಯಿತು.

1945: ಎರಡನೇ ಮಹಾಯುದ್ಧದ ನಂತರ ಪೊಟ್ಸ್‌ಡ್ಯಾಂ ಸಮ್ಮೇಳನ ಆರಂಭವಾಯಿತು. ಹ್ಯಾರಿ ಟ್ರೂಮನ್, ವಿನ್‌ಸ್ಟನ್ ಚರ್ಚಿಲ್ ಮತ್ತು ಜೊಸೆಫ್ ಸ್ಟಾಲಿನ್ ಭಾಗವಹಿಸಿದರು.

1955: ಆರ್ಪನ್‌ನೆಟ್ (ಇಂಟರ್ನೆಟ್ ಮುಂಚಿತ ರೂಪ) ಯೋಜನೆಗೆ ಆಧಾರವಾದ ಪ್ರಾರಂಭಿಕ ತಂತ್ರಜ್ಞಾನಗಳ ಅಭಿವೃದ್ಧಿ ಆರಂಭವಾಯಿತು.

1975: ಅಮೆರಿಕ ಮತ್ತು ಸೋವಿಯತ್ ಯುನಿಯನ್ ನಡುವೆ ಮೊದಲ ಜಂಟಿ ಬಾಹ್ಯಾಕಾಶ ಉಡಾವಣೆ.

**ಜನನ**

1894: ಗಿಯೋರ್ಜಿಯೋ ಡೆ ಕಿರಿಕೋ, ಇಟಾಲಿಯನ್ ಕಲಾವಿದ.

1935: ಡೊನಾಲ್ಡ್ ಸುಥರ್‌ಲ್ಯಾಂಡ್, ಕನೆಡಿಯನ್ ಚಿತ್ರನಟ.

1954: ಅಂಗ್ ಸಾನ್ ಸೂಕೀ, ಮ್ಯಾನ್ಮಾರ್‌ನ ಜನಪ್ರಿಯ ನಾಯಕಿ.

**ಮರಣ**

1790: ಆಡಮ್ ಸ್ಮಿತ್, ಆಧುನಿಕ ಅರ್ಥಶಾಸ್ತ್ರ ಪಿತಾಮಹ.

1959: ಬಿಲ್ಲಿ ಹಾಲಿಡೇ, ಅಮೆರಿಕದ ಪ್ರಸಿದ್ಧ ಜ್ಯಾಜ್ ಗಾಯಕಿ.

# ಷರಿಯಾ ಕಾನೂನಿನಲ್ಲಿ ಬ್ಲಡ್ ಮನಿ ಅಂದರೆ ಏನು?

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಷರಿಯಾ ಕಾನೂನು ಇಸ್ಲಾಮಿಕ್ ಧರ್ಮದ ಆಧಾರದ ಮೇಲೆ ರೂಪಿತವಾದ ಕಾನೂನು ವ್ಯವಸ್ಥೆಯಾಗಿದ್ದು, ಇದು ವೈಯಕ್ತಿಕ, ಸಾಮಾಜಿಕ ಮತ್ತು ಕ್ರಿಮಿನಲ್ ನ್ಯಾಯವನ್ನು ಒಳಗೊಂಡಿದೆ. ಈ ಕಾನೂನಿನ ಒಂದು ಪ್ರಮುಖ ಅಂಶವೆಂದರೆ ಬ್ಲಡ್ ಮನಿ ಅಥವಾ ದಿಯಾ.

ಬ್ಲಡ್ ಮನಿ ಎಂದರೇನು:

ಷರಿಯಾ ಕಾನೂನಿನ ಪ್ರಕಾರ, ಬ್ಲಡ್ ಮನಿ ಅಥವಾ ದಿಯಾ ಎಂಬುದು ಕೊಲೆ, ಗಾಯಗೊಳಿಸುವಿಕೆ ಅಥವಾ ಇತರ ಗಂಭೀರ ಅಪರಾಧಗಳಿಂದಾಗಿ ಬಾಧಿತ ವ್ಯಕ್ತಿಯ ಕುಟುಂಬಕ್ಕೆ ಅಥವಾ ವ್ಯಕ್ತಿಗೆ ಆರ್ಥಿಕ ಪರಿಹಾರವಾಗಿ ನೀಡುವ ಮೊತ್ತವಾಗಿದೆ. ಇದು ಇಸ್ಲಾಮಿಕ್ ಕಾನೂನಿನ ಕಿಸಾಸ್ (ಸಮಾನ ಶಿಕ್ಷೆ) ಮತ್ತು ದಿಯಾ ವ್ಯವಸ್ಥೆಯ ಭಾಗವಾಗಿದೆ. ಕೊಲೆಯಂತಹ ಗಂಭೀರ ಅಪರಾಧದ ಸಂದರ್ಭದಲ್ಲಿ, ಬಾಧಿತ ಕುಟುಂಬವು ಅಪರಾಧಿಗೆ ಶಿಕ್ಷೆಗೆ ಬದಲಾಗಿ ಆರ್ಥಿಕ ಪರಿಹಾರವನ್ನು ಒಪ್ಪಿಕೊಳ್ಳಬಹುದು. ಈ ವ್ಯವಸ್ಥೆಯ ಉದ್ದೇಶವೆಂದರೆ ಸಂತ್ರಸ್ತರಿಗೆ ನ್ಯಾಯ ಒದಗಿಸುವುದು, ಸಾಮಾಜಿಕ ಸಾಮರಸ್ಯವನ್ನು ಕಾಪಾಡುವುದು ಮತ್ತು ಅಪರಾಧಿಗೆ ತನ್ನ ತಪ್ಪಿಗೆ ಪರಿಹಾರ ನೀಡಲು ಅವಕಾಶ ಕಲ್ಪಿಸುವುದು. ಇದು ಕ್ಷಮೆಯನ್ನು ಉತ್ತೇಜಿಸುವ ಮೂಲಕ ಸಮಾಜದಲ್ಲಿ ಶಾಂತಿಯನ್ನು ಸ್ಥಾಪಿಸಲು ಸಹಾಯ ಮಾಡುತ್ತದೆ.

## ಐತಿಹಾಸಿಕ ಮತ್ತು ಧಾರ್ಮಿಕ ಆಧಾರ

ಬ್ಲಡ್ ಮನಿಯ ಪರಿಕಲ್ಪನೆಯು ಕುರಾನ್ ಮತ್ತು ಹದೀಸ್‌ಗಳಲ್ಲಿ ಆಧಾರವನ್ನು ಹೊಂದಿದೆ. ಕುರಾನ್‌ನ ಸೂರತ್ ಅಲ್-ಬಕರಾದ 2:178-179ನೇ ಆಯತ್‌ಗಳು ಕಿಸಾಸ್ ಮತ್ತು ದಿಯಾದ ತತ್ವವನ್ನು ಚರ್ಚಿಸುತ್ತವೆ. ಅದರ ಪ್ರಕಾರ ಕೊಲೆಯಂತಹ ಅಪರಾಧದಲ್ಲಿ ಸಂತ್ರಸ್ತ ಕುಟುಂಬವು ಅಪರಾಧಿಗೆ ಶಿಕ್ಷೆ (ಕಿಸಾಸ್) ಅಥವಾ ಆರ್ಥಿಕ ಪರಿಹಾರ (ದಿಯಾ) ಆಯ್ಕೆ ಮಾಡಿಕೊಳ್ಳಬಹುದು. ಇಸ್ಲಾಮ್‌ಗಿಂತ ಮೊದಲಿನ ಅರೇಬಿಯಾದ ಸಮಾಜದಲ್ಲಿ ಕೊಲೆಗೆ ಸಾಮಾನ್ಯವಾಗಿ ಪ್ರತೀಕಾರವೇ (ರಕ್ತದಾಹ) ಪರಿಹಾರವಾಗಿತ್ತು. ಅದರಿಂದ ಸಮಾಜದಲ್ಲಿ ಹಿಂಸೆ ಮತ್ತು ಕುಟುಂಬಗಳ ನಡುವೆ ದ್ವೇಷ ಹೆಚ್ಚಾಗುತ್ತಿತ್ತು. ಇಸ್ಲಾಮ್ ಈ ವ್ಯವಸ್ಥೆಗೆ ದಿಯಾದ ಆಯ್ಕೆಯನ್ನು ಪರಿಚಯಿಸಿತು. ಅದರಿಂದಾಗಿ ರಕ್ತಪಾತವನ್ನು ತಡೆಗಟ್ಟಲು ಮತ್ತು ಸಾಮರಸ್ಯ



ಉತ್ತೇಜಿಸಲು ಸಾಧ್ಯವಾಯಿತು.

## ದಿಯಾದ ಮೊತ್ತ

ದಿಯಾದ ಮೊತ್ತವು ಅಪರಾಧದ ತೀವ್ರತೆ, ಸಂತ್ರಸ್ತರ ಲಿಂಗ, ಸಾಮಾಜಿಕ ಸ್ಥಾನಮಾನ ಮತ್ತು ಸ್ಥಳೀಯ ಸಂಪ್ರದಾಯಗಳಿಗೆ ಅನುಗುಣವಾಗಿ ಬದಲಾಗುತ್ತದೆ. ಸಾಂಪ್ರದಾಯಿಕವಾಗಿ ಕೊಲೆಯ ಸಂದರ್ಭದಲ್ಲಿ ದಿಯಾದ ಮೊತ್ತವನ್ನು 100 ಒಂಟೆಗಳಿಗೆ ಸಮಾನವಾದ ಮೌಲ್ಯವೆಂದು ನಿಗದಿಪಡಿಸಲಾಗಿತ್ತು. ಆಧುನಿಕ ಕಾಲದಲ್ಲಿ ಈ ಮೊತ್ತವನ್ನು ಹಣದ ರೂಪದಲ್ಲಿ ಅಥವಾ ಇತರ ಆಸ್ತಿಗಳ ಮೂಲಕ ನೀಡಲಾಗುತ್ತದೆ. ಉದಾಹರಣೆಗೆ ಸೌದಿ ಅರೇಬಿಯಾದಂತಹ ಕೆಲವು ದೇಶಗಳಲ್ಲಿ ದಿಯಾದ ಮೊತ್ತವನ್ನು ಸ್ಥಳೀಯ ಕಾನೂನು ಮತ್ತು ಆರ್ಥಿಕ ಸ್ಥಿತಿಗೆ ತಕ್ಕಂತೆ ನಿರ್ಧರಿಸಲಾಗುತ್ತದೆ. ದಿಯಾವನ್ನು ಸಾಮಾನ್ಯವಾಗಿ ಅಪರಾಧಿಯ ಕುಟುಂಬ ಅಥವಾ ಸಮುದಾಯವು ಒಟ್ಟಾಗಿ ಭರಿಸುತ್ತದೆ. ಇದರಿಂದ ವೈಯಕ್ತಿಕ ಆರ್ಥಿಕ ಭಾರವನ್ನು ಕಡಿಮೆ ಮಾಡಲಾಗುತ್ತದೆ.

## ಆಧುನಿಕ ಸಂದರ್ಭದಲ್ಲಿ ಬ್ಲಡ್ ಮನಿ

ಆಧುನಿಕ ಕಾಲದಲ್ಲಿ ಸೌದಿ ಅರೇಬಿಯಾ, ಇರಾನ್, ಪಾಕಿಸ್ತಾನ ಮುಂತಾದ ಕೆಲವು ಇಸ್ಲಾಮಿಕ್ ದೇಶಗಳಲ್ಲಿ ದಿಯಾ ವ್ಯವಸ್ಥೆಯನ್ನು ಇನ್ನೂ ಅನುಸರಿಸಲಾಗುತ್ತದೆ. ಆದರೆ ಇದರ ಅನುಷ್ಠಾನವು ದೇಶದ ಕಾನೂನು ವ್ಯವಸ್ಥೆ ಮತ್ತು ಸಾಮಾಜಿಕ ರೀತಿ ರಿವಾಜುಗಳಿಗೆ ತಕ್ಕಂತೆ ಬದಲಾಗುತ್ತದೆ. ಉದಾಹರಣೆಗೆ ಕೆಲವು ದೇಶಗಳಲ್ಲಿ ದಿಯಾವನ್ನು ಕಾನೂನಿನಿಂದ ಕಡ್ಡಾಯಗೊಳಿಸಲಾಗಿದೆ. ಆದರೆ ಇತರೆಡೆ ಇದು ಸಂತ್ರಸ್ತ ಕುಟುಂಬದ ಒಪ್ಪಿಗೆಗೆ ಅವಲಂಬಿತವಾಗಿರುತ್ತದೆ.

ಆದರೆ ಈ ವ್ಯವಸ್ಥೆಯ ಬಗ್ಗೆ ಕೆಲವು ಟೀಕೆಗಳೂ ಇವೆ. ಕೆಲವರು ದಿಯಾವನ್ನು ನ್ಯಾಯವನ್ನು ಖರೀದಿಸುವ ವ್ಯವಸ್ಥೆ ಎಂದು ಟೀಕಿಸಿದರೆ, ಇತರರು ಇದು ಶ್ರೀಮಂತರಿಗೆ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಅವಕಾಶ ನೀಡುತ್ತದೆ ಎಂದು ವಾದಿಸುತ್ತಾರೆ. ಆದಾಗ್ಯೂ, ಷರಿಯಾ ಕಾನೂನಿನ ಪರಿಪ್ರೇಕ್ಷ್ಯದಲ್ಲಿ, ದಿಯಾ ಕ್ಷಮೆ, ಸಾಮರಸ್ಯ ಮತ್ತು ಸಂತ್ರಸ್ತರಿಗೆ ಆರ್ಥಿಕ ಸಹಾಯವನ್ನು ಒದಗಿಸುವ ಸಾಧನವಾಗಿದೆ.



ಬ್ಲಡ್ ಮನಿ ಅಥವಾ ದಿಯಾ ಷರಿಯಾ ಕಾನೂನಿನ ಒಂದು ವಿಶಿಷ್ಟ ಅಂಶವಾಗಿದ್ದು, ಇದು ನ್ಯಾಯ ಮತ್ತು ಕ್ಷಮೆಯ ನಡುವೆ ಸಮತೋಲನವನ್ನು ಸಾಧಿಸುವ ಗುರಿಯನ್ನು ಹೊಂದಿದೆ. ಇದು ಸಂತ್ರಸ್ತರಿಗೆ ಆರ್ಥಿಕ ಪರಿಹಾರವನ್ನು ಒದಗಿಸುವುದರ ಜೊತೆಗೆ ಸಮಾಜದಲ್ಲಿ ಶಾಂತಿ ಮತ್ತು ಸಾಮರಸ್ಯವನ್ನು ಕಾಪಾಡುವ ಉದ್ದೇಶ ಹೊಂದಿದೆ. ಆಧುನಿಕ ಸಂದರ್ಭದಲ್ಲಿ ಈ ವ್ಯವಸ್ಥೆಯ ಕೆಲವು ಆಯಾಮಗಳು ವಿವಾದಾಸ್ಪದವಾಗಿದ್ದರೂ, ಇದರ ಧಾರ್ಮಿಕ ಮತ್ತು ಸಾಮಾಜಿಕ ಮಹತ್ವವು ಇಸ್ಲಾಮಿಕ್ ಕಾನೂನಿನಲ್ಲಿ ಇಂದಿಗೂ ಮುಖ್ಯವಾಗಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248